ಹೊಸ ಮನುಷ್ಯ

ಬೆಲೆ : ರೂ ೨೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೭ ಜೂನ್ -೨೦೧೭ ಸಂಚಿಕೆ - ೧೧

ಕನ್ನಡ, ಹಿಂದಿ ಮತ್ತು ಇಂಗ್ಲೀಷ್

*

ಪ್ರಾದೇಶಿಕ ಜೈವಿಕತೆಯವಾದ

*

ಕಾಶ್ಮೀರ, ಪಾಕಿಸ್ತಾನ ಮತ್ತು ಭಾರತ

*

ಭೂಮಿಯನ್ನು ಉಳಿಸಿಕೊಳ್ಳುವ ಬಗೆ

ಜನಪದ ವಿಚಾರದಲ್ಲಿ

ಜೂನ್ - ೨೦೧೯

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜೂನ್- ೨೦೧೬
ಸಂಪುಟ - ೧೭
ಸಂಚಿಕೆ - ೧೧

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಸ್ನಾನವ ಮಾಡಿರೋ

ಸ್ನಾನವ ಮಾಡಿರೋ ಜ್ಞಾನತೀರ್ಥದಲ್ಲಿ
ನಾನು ನೀನೆಂಬಹಂಕಾರವ ಬಿಟ್ಟು
ತಂದೆ-ತಾಯಿಗಳ ಸೇವೆ ಒಂದು ಸ್ನಾನ
ಬಂಧನದವರ ಬಿಡಸಲೊಂದು ಸ್ನಾನ
ಮುಂದಣ ಮಾರ್ಗತಿಳಿದಡೊಂದು ಸ್ನಾನ
ಪರರೊಡವೆಯಪಹರಿಸದಿರೆ ಒಂದು ಸ್ನಾನ
ಪರಸತಿಯ ಬಯಸದಿದ್ದರೆ ಒಂದು ಸ್ನಾನ
ಪರರ ನಿಂದಿಸದಿರುವುದು ಒಂದು ಸ್ನಾನ
ಪರ ತತ್ವ ತಿಳಿದುಕೊಂಡರೆ ಗಂಗಾಸ್ನಾನ
ತನ್ನೊಳು ತಾನೇ ತಿಳಿದರೊಂದು ಸ್ನಾನ
ಅನ್ಯಾಯ ನುಡಿಯದಿದ್ದರೆ ಒಂದು ಸ್ನಾನ
ಅನ್ಯಾಯ ಮಾಡದಿರಲು ಒಂದು ಸ್ನಾನ
ಚೆನ್ನಾಗಿ ಹರಿಯ ನೆನೆಯೆ ಗಂಗಾಸ್ನಾನ
ಅತ್ತೆ-ಮಾವರ ಸೇವೆಯು ಒಂದು ಸ್ನಾನ
ಭರ್ತನ ಮಾತು ಕೇಳುವುದು ಒಂದು ಸ್ನಾನ
ಕ್ಷೇತ್ರಪಾತ್ರರ ಸಹವಾಸ ಒಂದು ಸ್ನಾನ
ಪಾರ್ಥಸಾರಥಿಧ್ಯಾನವೇ ಗಂಗಾ ಸ್ನಾನ
ವೇದಶಾಸ್ತ್ರವನೋದುವುದೊಂದು ಸ್ನಾನ
ಭೇದಾ-ಭೇದವ ತಿಳಿದರೊಂದು ಸ್ನಾನ
ಸಾಧು-ಸಜ್ಜನರ ಸಂಗ ಒಂದು ಸ್ನಾನ
ಪುರಂದರವಿಠಲನ ಧ್ಯಾನವೇ ಗಂಗಾಸ್ನಾನ

-ಶ್ರೀ ಪುರಂದರದಾಸರು

ಚಿಂತನೆಗೊಂದು ಸಂಗತಿ

ಜೀವನ ದೃಷ್ಟಿ ಒಂದು ಸಮಾನ ಚಿಂತನೆ

ಮನುಷ್ಯನ ಜೀವನ ಸಾರ್ವತ್ರಿಕವಾದುದು. ಪ್ರತಿಯೊಬ್ಬ ಮನುಷ್ಯನು ಜೀವನವನ್ನು ತನ್ನದೇ ರೀತಿಯಲ್ಲಿ ಅರ್ಥೈಸುತ್ತಾನೆ ಮತ್ತು ಅದನ್ನು ಸದುಪಯೋಗ ಪಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಇಂಥ ಒಂದು ಪ್ರಯತ್ನದಲ್ಲಿಯ ಸಾಮ್ಯತೆಯೊಂದು ಇತ್ತೀಚೆಗೆ ಕಾಕತಾಳೀಯವಂತೆ ಗೊತ್ತಾಯಿತು. ಥೈಲ್ಯಾಂಡ್ ದೇಶದಲ್ಲಿ ಜಾನ್-ಜಂದಾಯ್ ಜೀವನದ ಬಗ್ಗೆ ತನ್ನದೆ ಆದ ವಿಶಿಷ್ಟ ದೃಷ್ಟಿಕೋನವನ್ನು ಇಟ್ಟುಕೊಂಡಿದ್ದಾರೆ. ಬೇರೆಯವರಿಗೂ ಅದನ್ನು ಹೇಳುತ್ತಾರೆ. ಅನೇಕರು ಅವರ ವಿಚಾರದಿಂದ ಮಾರು ಹೋಗಿ ಅವರನ್ನು ಅನುಸರಿಸುತ್ತಾರೆ. ಜಾನ್-ಜಂದಾಯ್ ಇರುವ ಹಳ್ಳಿಯ ಹೆಸರು ಪುನ್-ಪುನ್. ಅವರ ಜೀವನ ಸಿದ್ಧಾಂತವೇನೆಂದರೆ ನಾವು ಎಷ್ಟು ಸಹಜವಾಗಬೇಕೆಂದರೆ ಪ್ರಾಣಿಗಳಾಂತಾಗಬೇಕು. ಪಕ್ಷಿಯೊಂದು ಎರಡು ದಿನಗಳಲ್ಲಿ ಗೂಡು ಕಟ್ಟುತ್ತದೆ. ಇಲಿಯೊಂದು ಒಂದು ರಾತ್ರಿಯಲ್ಲಿ ಬಿಲ ತೋಡುತ್ತದೆ. ಆದರೆ ಜಾಣ ಮನುಷ್ಯನಿಗೆ ಮನೆ ಕಟ್ಟಲು ಮೂವತ್ತು ವರ್ಷಗಳೇಬೇಕು. ಕೋಟ್ಯಾಂತರ ಜನರಿಗೆ ತಾವು ಈ ಜೀವನದಲ್ಲಿ ಒಂದು ಮನೆ ಹೊಂದಬಹುದು ಎಂಬ ಭರವಸೆಯೂ ಇಲ್ಲ. ನಮ್ಮ ಸ್ಫೂರ್ತಿ ಯನ್ನು ಏಕೆ ಕಳೆದುಕೊಳ್ಳಬೇಕು. ಸಾಮರ್ಥ್ಯವನ್ನು ಏಕೆ ವ್ಯರ್ಥಗೊಳಿಸಬೇಕು? ನಮ್ಮ ಎದುರಿನಲ್ಲಿ ಎರಡು ಆಯ್ಕೆಗಳಿವೆ. ಒಂದು ಸಲೀಸಾದರೆ ಮತ್ತೊಂದು ಕಠಿಣ. ಆಯ್ಕೆ ಆಯಾ ವ್ಯಕ್ತಿಗೆ ಬಿಟ್ಟಿದ್ದು.

ಜಾನ್‌ಜಂದಾಯ್ ಇನ್ನೊಂದು ಮಾತು ಹೇಳುತ್ತಾರೆ. "ಜಗತ್ತಿನಲ್ಲಿ ಎಷ್ಟೊಂದು ವಿಶ್ವವಿದ್ಯಾನಿಲಯಗಳಿವೆ. ಅಲ್ಲಿಂದ ಓದಿ ಬಂದವರ ಸಂಖ್ಯೆಯೂ ದೊಡ್ಡದಿದೆ. ಜಾಣರು ತುಂಬಿ ತುಳುಕುತ್ತಿದ್ದಾರೆ, ಆದರೆ ಬದುಕು ಮಾತ್ರ ಕಠಿಣವಾಗಿಬಿಟ್ಟಿದೆ."

***

ಜೀವನವೆಂದರೆ ಇಷ್ಟೇನೆ ಎಂದು ಅರ್ಥೈಸಿಕೊಂಡು ಮೈಸೂರು ನಗರದ ಸರಸ್ವತಿಪುರಂ ಬಡಾವಣೆಯಲ್ಲಿಯ ವೀರಶೈವ ರುದ್ರಭೂಮಿಯಲ್ಲಿ ಗುಂಡಿತೋಡಿ ಶವಗಳಿಗೆ ಅಂತ್ಯಸಂಸ್ಕಾರ ಮಾಡುತ್ತಾ ಏಕಾಂಗಿಯಾಗಿ ತನ್ನ ಸಂಸಾರದ ಜವಾಬ್ದಾರಿ ನಿರ್ವಹಿಸಿದ ನೀಲಮ್ಮ ಇನ್ನೊಂದು ಕಡೆ ಇದ್ದಾರೆ. ಜೀವನದಲ್ಲಿ ದುಃಖ-ಕಷ್ಟ-ನೋವು ಇತ್ಯಾದಿಗಳಿದ್ದರೂ ಛಲದಿಂದ ಜೀವನ ನಡೆಸಿ ಅದನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂಬ ಸಿದ್ಧಾಂತ ನೀಲಮ್ಮನದು.

ಜಾನ್-ಜಂದಾಯ್ ಮತ್ತು ನೀಲಮ್ಮ ಇವರಿಬ್ಬರ ಜೀವನ ದೃಷ್ಟಿಕೋನವನ್ನು ನಮ್ಮ ಜೀವನದಲ್ಲಿ ಸಮನ್ವಯಗೊಳಿಸಿಕೊಂಡರೆ ನಮ್ಮ ಜೀವನ ಸಹ್ಯವಾಗಬಹುದಲ್ಲವೆ?

ಕನ್ನಡ ಹಿಂದಿ ಮತ್ತು ಇಂಗ್ಲೀಷ್

– ಸುರೇಂದ್ರ ಕೌಲಗಿ

ದೇಶದ ಸಂಸತ್ತಿನ ಭಾಷಾ ಸಮಿತಿ ಹಿಂದಿ ಭಾಷೆಯ ಅಭಿವೃದ್ಧಿಗಾಗಿ ಸುಮಾರು ೧೧೭ ಶಿಫಾರಸ್ಸುಗಳನ್ನು ಮಾಡಿದೆ. ರಾಷ್ಟ್ರಪತಿಯವರು ಆ ಶಿಫಾರಸ್ಸುಗಳ ಆದೇಶಕ್ಕೆ ಸಹಿ ಹಾಕಿ ಅವುಗಳ ಅನುಷ್ಠಾನಕ್ಕೆ ದಾರಿಮಾಡಿಕೊಟ್ಟಿದ್ದಾರೆ. ಸಧ್ಯದ ರಾಷ್ಟ್ರಪತಿಯವರ ಅವಧಿ ಇನ್ನು ಕೇವಲ ಆರು ತಿಂಗಳು ಇದೆ. ಇಡೀ ರಾಷ್ಟ್ರ ಜೀವನದ ಪರಂಪರೆ, ಸಂಸ್ಕೃತಿ ಮತ್ತು ವಿವಿಧತೆಗಳ ಮೇಲೆ ಬಲವಾದ ಪ್ರಭಾವ ಬೀರುವ ಆದೇಶದ ಮೇಲೆ ತಮ್ಮ ಹಸ್ತಾಕ್ಷರ ಹಾಕುವ ಬದಲು ತಮ್ಮ ವಿವೇಚನೆಯನ್ನು ಉಪಯೋಗಿಸಿ ಅದನ್ನು ತಡೆಹಿಡಿದು ಮುಂದಿನ ರಾಷ್ಟ್ರಪತಿಯ ವಿವೇಚನೆಗೆ ಬಿಡಬಹುದಾಗಿತ್ತು. ಶಿಫಾರಸ್ಸುಗಳಲ್ಲಿ ಒಂದಾದ ಕೇಂದ್ರಿಯ ಶಾಲೆಗಳಲ್ಲಿ ಹಿಂದಿಯನ್ನು ಕಡ್ಡಾಯಗೊಳಿಸುವುದನ್ನು ತಡೆಹಿಡಿದಿದ್ದಾರೆ. ಅದರಂತೆಯೇ ಬೇರೆ ಶಿಫಾರಸ್ಸುಗಳ ಅನುಷ್ಠಾನವನ್ನೂ ತಡೆಹಿಡಿಯಬಹುದಾಗಿತ್ತು. ಸಂವಿಧಾನದ ಪ್ರಕಾರ ರಾಷ್ಟ್ರಪತಿಯವರು ಮಂತ್ರಿಮಂಡಲದ ತೀರ್ಮಾನಗಳನ್ನು ಮೀರುವುದು ಕಷ್ಟಸಾಧ್ಯವೆನಿಸಿದರೂ ಕೆಲ ತುರ್ತು ಮತ್ತು ಗಂಭೀರ ವಿಷಯಗಳ ಬಗ್ಗೆ ಒಪ್ಪಿಗೆ ಕೊಡುವಾಗ ಸಾರಸಾರ ವಿಚಾರ ಮಾಡಬೇಕಾದುದು ಮತ್ತು ಅವರ ಸಲಹೆಗಾರರ ಸಲಹೆಯನ್ನು ಪಡೆಯಬೇಕಾದುದು ಅಗತ್ಯವೆನಿಸುತ್ತದೆ. ತಮ್ಮ ವಿದ್ವತ್ತ್ ಮತ್ತು ಅನುಭವಗಳಿಂದ ಗೌರವ ಸಂಪಾದಿಸಿರುವ ರಾಷ್ಟ್ರಪತಿಯವರು ಈ ವಿಷಯದಲ್ಲಿಯೂ ಸಮಗ್ರವಾಗಿ ಆಲೋಚನೆಮಾಡಬಹುದಾಗಿತ್ತು. ಆದರೆ ರಾಷ್ಟ್ರಪತಿಯವರು ಸಮಗ್ರವಾಗಿ ಆಲೋಚನೆ ಮಾಡುವುದರಲ್ಲಿ ಹೇಗೆ ಕೆಲವೊಂದು ಸಲ ವಿಫಲರಾಗುತ್ತಾರೆಂಬುದಕ್ಕೆ ಇನ್ನೊಂದು ಉದಾಹರಣೆ: ಅವರು ಬರೆದಿರುವ ಆತ್ಮಚರಿತ್ರೆ, ಆ ಪುಸ್ತಕದಲ್ಲಿ ಅವರು ತುರ್ತುಪರಿಸ್ಥಿತಿಯ ಸಂದರ್ಭವನ್ನು ವಿವರಿಸುವುದನ್ನೇ ಕೈ ಬಿಟ್ಟಿದ್ದಾರೆ! ಅವರ ಆತ್ಮಚರಿತ್ರೆ, ದೇಶದ ಇತಿಹಾಸದ ಒಂದು ದಾಖಲೆ ಎನಿಸುವುದರಿಂದ ಹೊಸ ಪೀಳಿಗೆಯ ಯುವಕರು ತುರ್ತು ಪರಿಸ್ಥಿತಿಯಂಥ ಗಂಭೀರ ವಿಷಯದಲ್ಲಿ ವಿವರಾತ್ಮಕ ಸಂಗತಿಗಳಿಂದ ವಂಚಿತರಾಗುತ್ತಾರೆ. ಸಂಸತ್ತಿನ ರಾಜ್ಯಭಾಷಾ ನೀತಿಯ ಶಿಫಾರಸ್ಸುಗಳಿಗೆ ಹಸ್ತಾಕ್ಷರ ಹಾಕಿ ರಾಷ್ಟ್ರಪತಿಯವರು ಇನ್ನೊಂದು ದೊಡ್ಡ ಪ್ರಮಾದಮಾಡಿದ್ದರೆಂದು ಅನಿಸುತ್ತದೆ. ಸಂವಿಧಾನದ ಎಂಟನೇ ಪರಿಶ್ಚೇಧದಲ್ಲಿ ಇಪ್ಪತ್ತೆರಡು ಭಾರತೀಯ

ಭಾಷೆಗಳಿವೆ. ಸಂವಿಧಾನ ರಚನಾಕಾಲದಲ್ಲಿಯೂ ಆ ಭಾಷೆಗಳಿದ್ದವು. ಆದ್ದರಿಂದ ಬಹುಭಾಷಾ ಮತ್ತು ಬಹುಸಂಸ್ಕೃತಿ ಮತ್ತು ಬಹುಧರ್ಮೀಯ ದೇಶವಾದ ಭಾರತದಲ್ಲಿ ವಿವಿಧತೆಯಲ್ಲಿ ಏಕತೆಯನ್ನು ಕಾಪಾಡಿಕೊಂಡು ಬರುವ ಬಲವತ್ತರವಾದ ಅಭಿಪ್ರಾಯದಿಂದಲೇ ದೇಶವನ್ನು ಧರ್ಮಾತೀತ (ಸೆಕ್ಯುಲರ್) ರಾಷ್ಟ್ರವೆಂದು ಘೋಷಿಸಲಾಯಿತು. ಅದೇ ರೀತಿ ಇಪ್ಪತ್ತೆರೆಡು ಭಾಷೆಗಳೂ ರಾಷ್ಟ್ರ ಭಾಷೆಗಳೆಂದು ಘೋಷಿಸಲ್ಪಟ್ಟಿತು. ಭಾರತೀಯರೆಲ್ಲರಿಗೂ ಪೂರ್ಣತಃ ಅಲ್ಲದಿದ್ದರೂ ಅಲ್ಪ ಪ್ರಮಾಣದಲ್ಲಿಯಾದರೂ ಇಂಗ್ಲೀಷ್ ಮತ್ತು ಹಿಂದಿಯ ಜ್ಞಾನ ಇದ್ದುದರಿಂದ ಅವೆರೆಡು ಭಾಷೆಗಳನ್ನು ಆಡಳಿತ ಭಾಷೆಗಳನ್ನಾಗಿ ಇರಿಸಿಕೊಳ್ಳಲು ತೀರ್ಮಾನಿಸಲಾಯಿತು. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ರಾಷ್ಟ್ರಾಭಿಮಾನದ ಕಾರಣದಿಂದಾಗಿಯೂ ಮತ್ತು ಮಹಾತ್ಮ ಗಾಂಧೀಜಿಯವರ ಕೋರಿಕೆಯಿಂದಾಗಿಯೂ ಹಿಂದಿ ಭಾಷೆಗೆ ವಿಶೇಷ ಸ್ಥಾನವನ್ನು ಕೊಡಲಾಯಿತು. ಸ್ವಾತಂತ್ರ್ಯ ಬಂದ ಮೇಲೆ ಬಹುಸಂಖ್ಯಾತರಾದ ಹಿಂದಿ ಭಾಷಿಕರು ಮತ್ತು ಕೇಂದ್ರ ಸರ್ಕಾರ ಹಿಂದಿ ಭಾಷೆಗೆ ವಿಶೇಷ ಮಹತ್ವವನ್ನು ಕೊಡುತ್ತಾ ಬಂದರು. ಅದೇ ಸಮಯಕ್ಕೆ ದೇಶದಲ್ಲಿದ್ದ ರಾಜ್ಯ ಭಾಷೆಗಳಿಗೆ ಮಹತ್ವವನ್ನು ಕೊಡುವುದನ್ನು ಕಡಿಮೆ ಮಾಡಿದರು. ಭಾಷಾವಾರು ಪ್ರಾಂತ್ಯಗಳ ರಚನೆಯಾದ ಮೇಲೂ ಹಿಂದಿಯ ಪ್ರಚಾರ ಜೋರಾಗಿ ಸಾಗಿತು. ದೂರದರ್ಶನ ಮತ್ತು ಆಕಾಶವಾಣಿಗಳ ಮೂಲಕ ವ್ಯವಸ್ಥಿತವಾಗಿ ಹಿಂದಿಯ ಪ್ರಾಬಲ್ಯವನ್ನು ಹೆಚ್ಚಿಸುತ್ತಾ ಹೋಯಿತು. ನರೇಂದ್ರ ಮೋದಿಯವರು ಪ್ರಧಾನಿಯಾದ ಮೇಲಂತೂ ಹಿಂದಿ ಒಂದೇ ಭಾರತದ ಭಾಷೆ ಎಂಬಂತೆ ಬಿಂಬಿತವಾಗತೊಡಗಿದೆ. ಸಂಸದೀಯ ಶಿಫಾರಸ್ಸುಗಳು ಕೇವಲ ಹಿಂದಿ ಭಾಷೆಯ ಅಭಿವೃದ್ಧಿಗೆಂದೂ ಹೇರಿಕೆಗಾಗಿ ಅಲ್ಲವೆಂದೂ ವೆಂಕಯ್ಯನಾಯ್ಡುರವರು ಹೇಳುತ್ತಿರುವುದಾದರೂ ಕೆಲವು ಶಿಫಾರಸ್ಸುಗಳಂತೂ ಹಿಂದಿಯನ್ನು ಹೇರುವ ಪ್ರಯತ್ನವೇ ಆಗಿವೆ. ವಿಮಾನ ಮತ್ತು ರೈಲುಗಳಲ್ಲಿ ಹಾಗೂ ಕೇಂದ್ರ ಸರ್ಕಾರದ ಕಛೇರಿಗಳಲ್ಲಿ ಬ್ಯಾಂಕುಗಳಲ್ಲಿ ಹಿಂದಿಯದೇ ಪ್ರಾಬಲ್ಯವಾಗುವ ಎಲ್ಲ ಲಕ್ಷಣಗಳು ಕಾಣುತ್ತಿವೆ. ಈಗಾಗಲೇ ಅದು ಅನುಭವಕ್ಕೂ ಬರುತ್ತಿದೆ.

ಕನ್ನಡ ಪ್ರದೇಶ ಭಾಷೆಯೂ ಹೌದು ಮತ್ತು ಆಡಳಿತ ಭಾಷೆಯೂ ಹೌದು. ಆದ್ದರಿಂದ ಕರ್ನಾಟಕದ ಸರ್ಕಾರಿಯ-ಸರ್ಕಾರೇತರ ಹಾಗೂ ಎಲ್ಲ ಖಾಸಗಿ ವಲಯಗಳಲ್ಲಿ ಕನ್ನಡಕ್ಕೆ ಪ್ರಾಧಾನ್ಯತೆ ದೊರೆಯಬೇಕಾದುದು ನ್ಯಾಯಾಸಮ್ಮತ. ಆದರೆ ಕರ್ನಾಟಕದಲ್ಲಿರುವ ಕೇಂದ್ರ ಸರ್ಕಾರದ ಎಲ್ಲ ಸಂಸ್ಥೆಗಳು ಹಿಂದಿಯ ಪ್ರಚಾರವನ್ನೇ ಮಾಡುತ್ತಿವೆ. ಆಕಾಶವಾಣಿಯಂತೂ ಹಿಂದಿ

ಪ್ರಚಾರಕ್ಕಾಗಿ ಸೊಂಟಕಟ್ಟಿ ನಿಂತಿರುವಂತಿದೆ. ಸಮಯ ಸಿಕ್ಕಾಗಲೆಲ್ಲ ಹಿಂದಿ ಚಿತ್ರಗೀತೆಗಳನ್ನು ಪ್ರಸಾರ ಮಾಡುವುದು ಮತ್ತು ಹಿಂದಿ ಭಾಷಾ ಪಾಠವನ್ನು ಮಾಡುವುದು ಮತ್ತು ಹಿಂದಿ ಭಾಷೆಯ ಜಾಹಿರಾತುಗಳನ್ನು ಹಾಕುವುದು. ತನ್ನ ಕರ್ತವ್ಯವೆಂದು ಭಾವಿಸಿದೆ. ಹಿಂದಿ ಚಿತ್ರಗೀತೆಗಳ ಸ್ಥಳದಲ್ಲಿ ಭಾರತದ ಇತರ ಭಾಷೆಗಳಲ್ಲಿಯ ಅಥವಾ ಪಕ್ಕದ ರಾಜ್ಯಗಳ ಭಾಷೆಗಳ ಚಿತ್ರಗೀತೆಯನ್ನು ಆಕಾಶವಾಣಿ ತಪ್ಪಿಯೂ ಪ್ರಸಾರಮಾಡುವುದಿಲ್ಲ. ವಿಧಿಯಿಲ್ಲದೆ ಕನ್ನಡ ಚಿತ್ರಗೀತೆಗಳನ್ನು ಪ್ರಸಾರಮಾಡುವಂತಿದೆ. ಕನ್ನಡಿಗರಿಗೆ ಹಿಡಿದಿರುವ ಇಂಗ್ಲೀಷ್ ವ್ಯಾಮೋಹ ಮತ್ತು ರಾಜ್ಯ ಸರ್ಕಾರದ ಹೇಡಿತನ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಮತ್ತು ಖಾಸಗಿ ವಲಯದ ಕ್ಷೇತ್ರಗಳಲ್ಲಿ ಕನ್ನಡ ಭಾಷೆಗೆ ಗೌರವವಿಲ್ಲವಾಗಿದೆ, ಸ್ಥಾನವು ಇಲ್ಲವಾಗಿದೆ. ಇಂಥ ಸನ್ನಿವೇಶದಲ್ಲಿ ಕನ್ನಡದ ಮೇಲೆ ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳ ದಾಳಿ ಏಕಾಕಾಲಕ್ಕೆ ಆಗುತ್ತಿದೆ. ಈ ಪ್ರಕಾರದ ಎರಡು ದಾಳಿಗಳನ್ನು ಎದುರಿಸುವ ಶಕ್ತಿ ಕನ್ನಡಕ್ಕೆ ಬರಬೇಕಾದರೆ ಏನು ಮಾಡಬೇಕೆಂಬ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಾದ ಸಮಯ ಬಂದಿದೆ. ಈ ವಿಷಯದಲ್ಲಿ ರಾಜಕಾರಣಿಗಳು, ಸಾಹಿತಿಗಳು, ಬುದ್ಧಿಜೀವಿಗಳು ಮತ್ತು ಜನಸಾಮಾನ್ಯರು ಹೊಂದುಗೂಡಬೇಕಿದೆ. ಕನ್ನಡದ ಮತ್ತು ಕನ್ನಡಿಗರ ಅಸ್ಮಿತೆಯ ಪ್ರಶ್ನೆ ಇದಾಗಿರುವುದರಿಂದ ಜನಸಾಮಾನ್ಯ ಕನ್ನಡಿಗರೇ ಮುಖ್ಯವಾಗಿ ಕನ್ನಡ ಮಾಧ್ಯಮದಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳು ಕನ್ನಡದ ಉಳಿವಿಕೆಗಾಗಿ ಚಳುವಳಿಯನ್ನು ಪ್ರಾರಂಭಿಸಬೇಕಿದೆ. ಭಾಷಾವಾರು ಪ್ರಾಂತ್ಯ ರಚನೆಯ ಹಿಂದಿದ್ದ ಸಾಂಸ್ಕೃತಿಕ ಮತ್ತು ಆಡಳಿತಾತ್ಮಕ ವಿಚಾರಗಳನ್ನು ಪುನರ್‌ಮನನ ಮಾಡಿಕೊಳ್ಳಬೇಕಿದೆ. ವಿವಿಧ ಭಾಷಾಪ್ರಾಂತ್ಯಗಳಿಗಾಗಿ ಅಲ್ಲಲ್ಲಿಯ ಭಾಷಿಕರು ಮತ್ತು ಭಾಷಾಭಿಮಾನಿಗಳು ಮಾಡಿದ್ದ ಹೋರಾಟ ಮತ್ತು ತ್ಯಾಗವನ್ನು ನೆನಪಿಸಿಕೊಳ್ಳಬೇಕಿದೆ. ನಾವು ಭಾರತೀಯರು ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳ ದಾಳಿಯಿಂದ ಪಾರಾಗಲು ದೇಶದ ವಿಭಜನೆಯ ಮಾತನ್ನು ಆಡದಿದ್ದರೂ ಒಕ್ಕೂಟಗೊಳಗಿದ್ದೇ ರಾಜ್ಯಭಾಷೆಗಳು ಹೇಗೆ ನಿಜವಾಗಿಯೂ ಜನರ ಭಾಷೆಯಾಗಬಲ್ಲವೆಂದು ಯೋಚನೆ ಮಾಡಬೇಕಿದೆ.

ಇಂಗ್ಲೀಷ್ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರಿಕ ಭಾಷೆಯಾಗಿದ್ದರೂ ಕೂಡ ಜಗತ್ತಿನಲ್ಲಿ ಇನ್ನು ಅನೇಕ ಭಾಷೆಗಳು ಇಂಗ್ಲೀಷ್‌ನಷ್ಟೇ ಪ್ರಬಲವಾಗಿವೆ ಮತ್ತು ಅಗತ್ಯವಾಗಿವೆ ಎಂಬುದನ್ನು ನಾವು ಮರೆಯಕೂಡದು. ಚೀನಿ, ಜಪಾನಿ, ಜರ್ಮನ್. ಫ್ರೆಂಚ್ ರಷ್ಯನ್ ಮುಂತಾದ ಭಾಷೆಗಳನ್ನು ಕಲಿಯುವುದು ಕೂಡ ಇಂದಿನ ಕಾಲದ ಜರೂರಾಗಿದೆ.

ಸಂಸತ್ತಿನ ರಾಷ್ಟ್ರಭಾಷಾ ಅನುಷ್ಠಾನ ಸಮಿತಿಯು ಮಾಡಿದ ಎಲ್ಲ ಶಿಫಾರಸ್ಸುಗಳನ್ನು ರಾಷ್ಟ್ರಪತಿಯವರು ಒಪ್ಪಿ ಅದರ ಅನುಷ್ಠಾನಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ದೇಶದ ಎಲ್ಲ ಶಾಲೆಗಳಲ್ಲಿ ಹಿಂದಿಯನ್ನು ಕಡ್ಡಾಯ ಮಾಡಬೇಕೆಂಬ ಶಿಫಾರಸ್ಸನ್ನು ಮಾತ್ರ ಅವರು ಅದೃಷ್ಟವಾಶಾತ್ ತಡೆಹಿಡಿದಿದ್ದಾರೆ. ಕೇಂದ್ರಿಯ ಪರೀಕ್ಷಾ ಮಂಡಲಿಯ ಪಠ್ಯಪುಸ್ತಕವನ್ನು ಅನುಸರಿಸುವ ಎಲ್ಲ ಶಾಲೆಗಳಲ್ಲಿ ಹಿಂದಿಯನ್ನು ಕಡ್ಡಾಯ ಕಲಿಕಾ ವಿಷಯವನ್ನಾಗಿ ಮಾಡಲಾಗಿದೆ. ಸರ್ಕಾರದ ಎಲ್ಲ ಸಾರ್ವಜನಿಕ ಸೇವೆಗಳಲ್ಲಿ ಹಿಂದಿಗೆ ಮಾತ್ರ ಪ್ರಾಮುಖ್ಯತೆಯನ್ನು ಕೊಡಲಾಗುವ ಶಿಫಾರಸ್ಸಿಗೂ ರಾಷ್ಟ್ರಪತಿಯವರ ಒಪ್ಪಿಗೆ ಸಿಕ್ಕಿದೆ. ರಾಷ್ಟ್ರಪತಿಯವರ ಅಧಿಕಾರವಧಿ ಕೇವಲ ನಾಲ್ಕರಿಂದ ಐದು ತಿಂಗಳು ಇರುವಾಗ ಬಹುವ್ಯಾಪಕವಾಗಿ ದೇಶದ ಸಾಂಸ್ಕೃತಿಕ ಜೀವನದ ಮೇಲೆ ಪರಿಣಾಮವನ್ನು ಉಂಟುಮಾಡುವ ಇಂಥ ಶಿಫಾರಸ್ಸುಗಳಿಗೆ ರಾಷ್ಟ್ರಪತಿಯವರಿಂದ ಒಪ್ಪಿಗೆ ಪಡೆಯುವುದರ ಮೂಲಕ ಕೇಂದ್ರ ಸರ್ಕಾರವು ದೇಶದ ಜನರಲ್ಲಿ ಅಸಂತೋಷ ಮೂಡುವುದಕ್ಕೆ ಮತ್ತು ಭಾಷಾ ವೈವಿಧ್ಯತೆಯ ಸ್ಥಳದಲ್ಲಿ ಭಾಷಾಏಕತೆ ತರಲು ಕಾರಣವಾಗಿದೆ. ಕರ್ನಾಟಕದಲ್ಲಿ ಈ ಬಗ್ಗೆ ಅಸಂತೋಷವಿದೆ. ಬೇರೆ ರಾಜ್ಯಗಳಲ್ಲಿಯೂ ಅಸಂತೋಷ ಇರಬಹುದು. ಅಲ್ಲಿ ಅಸಂತೋಷವು ಯಾವ ರೀತಿ ಪ್ರಕಟಗೊಳ್ಳುತ್ತಿದೆಯೆಂಬುದನ್ನು ತಿಳಿದುಕೊಳ್ಳಬೇಕಾದುದು ಅಗತ್ಯವಾಗಿದೆ. ಹಿಂದಿಯೇತರ ರಾಜ್ಯಗಳಲ್ಲಿಯ ಭಾಷಾ ಪ್ರೇಮಿಗಳೊಂದಿಗೆ ಸಂಪರ್ಕವನ್ನು ಏರ್ಪಡಿಸಿಕೊಳ್ಳಬೇಕಿದೆ. ಸಂಸತ್ತಿನ ರಾಷ್ಟ್ರಭಾಷಾ ಸಮಿತಿಯ ಆ ಎಲ್ಲ ನೂರಹದಿನೇಳು ಶಿಫಾರಸ್ಸುಗಳ ಪರಿಣಾಮ ಕನ್ನಡ ಭಾಷಾ ಆಡಳಿತ ಮತ್ತು ಶೈಕ್ಷಣಿಕ ವ್ಯವಸ್ಥೆಯ ಮೇಲೆ ಯಾವ ಯಾವ ರೀತಿ ಆಗುತ್ತದೆ ಎಂಬ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೂಡಲೆ ಕೂಲುಂಕುಶವಾಗಿ ಪರಿಶೀಲಿಸಬೇಕು. ಅದಕ್ಕನುಗುಣವಾಗಿ ರಾಜ್ಯದಲ್ಲಿ ಕನ್ನಡದ ಪ್ರಾಮುಖ್ಯತೆ ಉಳಿಯುವಂಥ ಕ್ರಮಗಳಿಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು. ಹಿಂದಿ ಭಾಷಾ ಅಭಿವೃದ್ಧಿಯ ಕ್ರಮಗಳ ಮೂಲಕ ಆ ಭಾಷೆಯನ್ನು ಹಿಂದಿಯೇತರ ರಾಜ್ಯಗಳ ಮೇಲೆ ಹೇರುವುದನ್ನು ವಿರೋಧಿಸುತ್ತಿರುವ ಪಕ್ಷಗಳ ಜೊತೆ ಸಂಪರ್ಕವಿರಿಸಿಕೊಂಡು ರಾಜ್ಯದ ಪಕ್ಷಗಳು ಹೋರಾಡಬೇಕು. ಆ ನಿಟ್ಟಿನತ್ತ ಕರ್ನಾಟಕದ ಭಾಷಾಭಿಮಾನಿಗಳು ಮುಂದುವರೆಯಲಿ. ಹಿಂದಿಯೇತರ ರಾಜ್ಯಗಳಲ್ಲಿಯ ಜನರ ಸಂಘಟನೆಯೊಂದಿಗೆ ಅಹಿಂಸಕ ಅಸಹಕಾರ ಪ್ರತಿಭಟನೆ ಮಾಡುವುದರ ಮೂಲಕ ಹಿಂದಿ ಭಾಷಾ ಹೇರಿಕೆಯನ್ನು ತಡೆಯಬಹುದು.

●

ಪ್ರಾದೇಶಿಕ ಜೈವಿಕತೆಯವಾದ

-ಡೈಡಿಯರ್ ಪ್ರೋಸ್ಟ್

-ಸಂದರ್ಶಕರು ರಜತ್ ಗೈ

ಪ್ರಾದೇಶಿಕ ಜೈವಿಕತೆವಾದವೆನ್ನುವುದು ೧೯೭೦ರ ದಶಕಗಳಲ್ಲಿ ಇಟಲಿಯಲ್ಲಿ ಜನ್ಮ ತಾಳಿತು. ನಮ್ಮ ಸುತ್ತಲಿನ ಪರಿಸರದ ಬಗ್ಗೆ ಪುನರ್‌ಮನನ ಮಾಡಿಕೊಳ್ಳುವ ಒಂದು ಕ್ರಾಂತಿಕಾರಿ ವಿಧಾನ. ಜಗತ್ತಿನಾದ್ಯಂತ ಪರಿಸರಾತ್ಮಕ ಮತ್ತು ಸಾಮಾಜಿಕ ಸಮಸ್ಯೆಗಳು ಉದ್ಭವಿಸುತ್ತಿರುವ ಇಂದಿನ ಸಂದರ್ಭದಲ್ಲಿ ಆ ಕಲ್ಪನೆಗೆ ವಿಶೇಷ ಮಹತ್ವ ಬರುತ್ತದೆ. ನಮ್ಮ ಸುತ್ತಲಿನ ಪರಿಸರವನ್ನು ಯಾವ ರೀತಿಯಲ್ಲಿ ಅಭಿವೃದ್ಧಿ ಪಡೆಸಲು ಆಲೋಚಿಸುತ್ತೇವೆ ಎಂಬ ಬಗ್ಗೆ ಹೊಸ ಮಾರ್ಗಗಳನ್ನು ನಾವು ಅನ್ವೇಷಿಸುವ ಅಗತ್ಯ ಇದೆ. ಅದಕ್ಕಾಗಿ ಜನರು ತಮ್ಮ ಭೂಮಿ, ಸುತ್ತಲಿನ ಪ್ರಕೃತಿ ಮತ್ತು ಸಂಸ್ಥೆಗಳೊಂದಿಗೆ ಸಂಬಂಧ ಇಟ್ಟುಕೊಳ್ಳುವಂತೆ ನಾವು ಮಾಡಬೇಕಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಜೈವಿಕ ಪ್ರದೇಶವೆಂದು ಗುರುತಿಸಲ್ಪಡುವ ಸ್ಥಳದ ಅಭಿವೃದ್ಧಿಯ ಬಗ್ಗೆ ಹೊಸದೊಂದು ಮಾದರಿಯನ್ನೇ ರಚಿಸಬೇಕು. ಆಡಳಿತಾತ್ಮಕವೂ ಅಲ್ಲದ. ರಾಜಕೀಯವೂ ಅಲ್ಲದ, ಸಾಂಸ್ಕೃತಿಕ ಎಲ್ಲೆಗಳನ್ನು ಗೊತ್ತುಮಾಡಬೇಕು. ಒಂದು ನಿರ್ದಿಷ್ಟ ಕ್ಷೇತ್ರದ ಇತಿಹಾಸ ಮತ್ತು ಜಾಗತಿಕ ಪುರಾತತ್ವಶಾಸ್ತ್ರದ ಮಹತ್ವದ ವಿಷಯಗಳನ್ನು ವಿಶ್ಲೇಷಿಸಿ ಅದನ್ನು ಆ ಪ್ರದೇಶದ ಆತ್ಮವೆಂದು ಗುರುತಿಸಬೇಕು. ಈ ಕಾರ್ಯವನ್ನು ಸಮಾಜದ ಎಲ್ಲ ವರ್ಗದ ಜನರು ಸೇರಿ ಮಾಡುವಂತಾಗಬೇಕು. ಆ ಜನರು ಕೊಡುವ ಮಾಹಿತಿಯನ್ನು ಉಪಯೋಗಿಸಿಕೊಂಡು ಆ ಕ್ಷೇತ್ರಕ್ಕೆ ಸಂಬಂಧಿಸಿದ ಯೋಜನೆಯನ್ನು ತಯಾರಿಸಬೇಕು. ಆ ಯೋಜನೆಯು ಪರಂಪರಾಗತ ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಗಿಂತ ಭಿನ್ನವಾಗಿರಬೇಕು. ಪ್ರಚಲಿತ ಅಭಿವೃದ್ಧಿ ಪ್ರಕ್ರಿಯೆಯು ಆ ಪ್ರದೇಶದ ಎಲ್ಲ ಸಂಪನ್ಮೂಲಗಳನ್ನು ಮತ್ತು ಸಂಗ್ರಹಿತವಾಗಿರುವ ಎಲ್ಲ ಪ್ರಾಕೃತಿಕ ಸಂಪತ್ತನ್ನು ಉಪಯೋಗಿಸಿದ ನಂತರ ಹೊರ ಬರುವ ತ್ಯಾಜ್ಯವನ್ನು ಪರಿಸರದಲ್ಲಿ ಎಲ್ಲೆಂದರಲ್ಲಿ ಸುರಿಯುತ್ತದೆ. ಇದಕ್ಕೆ ಪರ್ಯಾಯವಾಗಿ ಪ್ರಾದೇಶಿಕ ಜೈವಿಕತೆಯು ಆ ತ್ಯಾಜ್ಯವನ್ನು ಪರಿಸರದ ಅರ್ಥಶಾಸ್ತ್ರದ ಪ್ರಕಾರ ತನ್ನಲ್ಲಿ ಸೇರ್ಪಡೆಗೊಳಿಸಿಕೊಳ್ಳುತ್ತದೆ. ಜಾಗತೀಕರಣ ಬಂಡವಾಳವಾದದ ವಾಸ್ತವ ಸಂಗತಿ. ಉದಾಹರಣೆಗೆ ಸ್ಮಾರ್ಟ್‌ಫೋನ್. ಅದರಲ್ಲಿರುವ ವಿವಿಧ ಬಗೆಯ ಬಿಡಿ ಭಾಗಗಳು ಜಗತ್ತಿನಾದ್ಯಂತ ಇರುವ ಬೇರೆಬೇರೆ ದೇಶಗಳಲ್ಲಿ

ತಯಾರಾಗಿರುತ್ತವೆ. ಆ ಫೋನಿನ ಒಳಗೆ ಇರುವ ಸ್ಮಾರ್ಟ್‌ಕಾರ್ಡ್ ಸಿಲಿಕಾದಿಂದ ತಯಾರಿಸಲ್ಪಟ್ಟಿರುತ್ತದೆ. ಅದು ಖನಿಜ ಪದಾರ್ಥವಾಗಿರುವುದರಿಂದ ಅದಕ್ಕಾಗಿ ಗಣಿಗಾರಿಕೆಯನ್ನು ಮಾಡಬೇಕಾಗುತ್ತದೆ. ಗಣಿಗಾರಿಕೆ ಪರಿಸರಕ್ಕೆ ಧಕ್ಕೆ ಉಂಟು ಮಾಡುವುದಲ್ಲದೆ ಗಣಿಗಾರಿಕೆಯ ಸ್ಥಳದಲ್ಲಿರುವ ಮೂಲನಿವಾಸಿಗಳನ್ನು ಉಚ್ಚಾಟಣೆ ಮಾಡುತ್ತದೆ.

ನಾವು ಪ್ರಾದೇಶಿಕತೆ ಮತ್ತು ಜಾಗತಿಕತೆಯ ಮಧ್ಯೆ ಸಮತೋಲನವನ್ನು ಸೃಷ್ಟಿಸಬೇಕು. ಹಾಗೆ ಮಾಡುವುದರಿಂದ ಸಾಧ್ಯವಾದಷ್ಟೂ ಪರಿಸರ ಹಾನಿಯನ್ನು ಕಡಿಮೆ ಮಾಡಬಹುದು. ಯಾವುದೇ ಒಂದು ಪದಾರ್ಥವನ್ನು ತಯಾರಿಸುವಾಗ ಬಹಿರಂಗದಲ್ಲಿ ಉಂಟಾಗುವ ನಕಾರಾತ್ಮಕ ಪರಿಣಾಮಗಳ ಬಗ್ಗೆಯೂ ಗಮನಹರಿಸಬೇಕು. ಬಹಿರಂಗದಲ್ಲಿ ಉಂಟಾಗುವ ನಕಾರಾತ್ಮಕ ಪರಿಣಾಮಗಳು ಹೆಚ್ಚಾಗಿ ಪರಿಸರಾತ್ಮಕ ಮತ್ತು ಸಾಮಾಜಿಕವಾಗಿರುತ್ತವೆ. ಆದ್ದರಿಂದ ನಾವು ಜಾಗತೀಕರಣವನ್ನು ತಳಮಟ್ಟದಿಂದ ಕಟ್ಟಬೇಕು. ಅಂದರೆ ಸ್ಥಳೀಯ ಜನರು ಮತ್ತು ಪ್ರಕೃತಿಯೊಂದಿಗೆ ಹೊಂದಾಣಿಕೆ ಇಟ್ಟುಕೊಂಡು ಕೆಲಸ ಮಾಡಬೇಕು. ಅದು ಯಾವ ರೀತಿ ಇರಬೇಕೆಂದರೆ ಜನರ ಮತ್ತು ಪ್ರಕೃತಿಯ ಮೇಲೆ ಜಾಗತೀಕರಣದ ಯಾವುದೇ ನಕಾರಾತ್ಮಕ ಪರಿಣಾಮಗಳು ಆಗದಂತಿರಬೇಕು.

ಭಾರತ ಪ್ರಪ್ರಥಮವಾಗಿ ತನ್ನ ಪರಿಸರ ವಿಜ್ಞಾನವನ್ನು ಪುನರ್‌ಜ್ಜೀವಿತಗೊಳಿಸಬೇಕು. ಅದಕ್ಕಾಗಿ ಹೊಸದಾಗಿ ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮವನ್ನು ಪ್ರಾರಂಭಿಸಬೇಕು. ಆ ಕಾರ್ಯಕ್ರಮದಲ್ಲಿ ಸ್ಥಳೀಯ ಸಸ್ಯಗಳ ಬಗ್ಗೆ ಹೆಚ್ಚು ಒತ್ತು ಇರಬೇಕು. ಈ ಕಾರ್ಯಕ್ರಮ ಅಗತ್ಯವೇಕೆಂದರೆ ಹವಾಮಾನದಲ್ಲಿಯ ಬದಲಾವಣೆ ಒಂದು ವಾಸ್ತವ ಸಂಗತಿ. ಮುಂಬರುವ ಹತ್ತು-ಇಪ್ಪತ್ತು ವರ್ಷಗಳಲ್ಲಿ ಹವಾಮಾನದಲ್ಲಿ ಉಂಟಾಗುವ ಅಸಾಮಾನ್ಯ ಬದಲಾವಣೆ ಮಹಾವಿಪತ್ತುಗಳನ್ನು ಸೃಷ್ಟಿಸುತ್ತದೆ. ದುರ್ದೈವದ ಸಂಗತಿಯೇನೆಂದರೆ ಸರ್ಕಾರವಾಗಲೀ, ಪ್ರಜೆಗಳಾಗಲೀ ಯಾವ ಕ್ಷಣದಲ್ಲಾದರು ಸಿಡಿಯುವ ಬಾಂಬ್ ಮೇಲೆ ತಾವು ಕುಳಿತ್ತಿದ್ದೇವೆಂಬುದನ್ನು ತಿಳಿದುಕೊಂಡಿಲ್ಲ. ಸರ್ಕಾರಗಳಿಗೆ ಈ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಯಾವ ಮಾರ್ಗವೂ ಗೊತ್ತಿಲ್ಲ. ಇನ್ನು ಜನರು ವಿಶೇಷವಾಗಿ ಮಧ್ಯಮವರ್ಗದ ಜನರು ಕೊಳ್ಳಬಾಕಜೀವನವಿಧಾನದಲ್ಲಿಯೇ ತಲ್ಲೀನರಾಗಿದ್ದಾರೆ. ಬಡವರ ಸ್ಥಿತಿ ಏನು ಎಂಬ ಬಗ್ಗೆ ಅವರು ಕಾಳಜಿ ಇಲ್ಲದವರಾಗಿದ್ದಾರೆ. ಆದ್ದರಿಂದ ಸಾಮಾಜಿಕ ವಿಜ್ಞಾನಾಧಾರಿತ ಶೈಕ್ಷಣಿಕ ಸುಧಾರಣೆಗಳು ಬಹುಮಹತ್ವದ್ದಾಗಿದೆಯೆಂದು ನನಗೆನಿಸುತ್ತದೆ. ಏಕೆಂದರೆ ಪಶ್ಚಿಮದೇಶಗಳಲ್ಲಿ ಬಲಯುತವಾದ ಕಲ್ಯಾಣಕಾರಿ

ರಾಜ್ಯಗಳು ಇವೆ. ಅಲ್ಲದೆ ಬಲಯುತವಾದ ಸಾಮಾಜಿಕ ವಿಜ್ಞಾನ, ಬಲಯುತವಾದ ವಿಶ್ವವಿದ್ಯಾನಿಲಯಗಳು, ಬಲಯುತವಾದ ಬೌದ್ಧಿಕ ಜೀವನ ಇವೆ, ಭಾರತದಲ್ಲಿ ವಿಮರ್ಶಾತ್ಮಕ ಚಿಂತನಾಕ್ರಮವನ್ನು ಕಟ್ಟಬೇಕಾಗಿದೆ. ಈ ನಿಟ್ಟಿನಲ್ಲಿ ಭಾರತೀಯ ವಿಶ್ವವಿದ್ಯಾನಿಲಯಗಳು ಪರಿಸರವಿಜ್ಞಾನ ಮತ್ತು ಗ್ರಾಮ ಸಮುದಾಯಗಳನ್ನು ನಿರ್ಮಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕಾಗುತ್ತದೆ.

ಭಾರತದಲ್ಲಿ ಇದುವರೆಗೂ ಪರಿಸರ ಉಳಿಸುವುದಕ್ಕಾಗಿ ಯಾವುದೇ ರಾಜಕೀಯ ಪಕ್ಷವಿಲ್ಲ. (ಗ್ರೀನ್ ಪೊಲಿಟಿಕಲ್ ಪಾರ್ಟಿ). ಏಕೆಂದರೆ ಭಾರತೀಯರ ಮನದಾಳದಲ್ಲಿ ಬಡತನಕ್ಕೂ ಮತ್ತು ಪರಿಸರಕ್ಕೂ ಹೊಂದಾಣಿಕೆಯ ವಿಚಾರವೇ ಇಲ್ಲ. ಬಡತನ ಮತ್ತು ಪರಿಸರ ಯಾವಾಗಲೂ ಒಟ್ಟಿಗೆ ಕೆಲಸ ಮಾಡುತ್ತಿರುತ್ತವೆ. ಭಾರತೀಯರು ಗ್ರೀನ್ ಪಾರ್ಟಿ ಹೊಂದಬೇಕಾದರೆ ಅವೆರಡನ್ನೂ ಸಂಯೋಜಿಸಬೇಕು. ಪರಿಸರ ಮತ್ತು ಬಡತನವನ್ನು ಪ್ರತ್ಯೇಕಿಸಿರುವುದಕ್ಕಾಗಿ ನಾನು ಭಾರತೀಯರನ್ನು ದೂಷಿಸುವುದಿಲ್ಲ. ಸ್ವಾತಂತ್ರ್ಯದ ನಂತರ ಅದರಲ್ಲಿಯೂ ಮುಖ್ಯವಾಗಿ ಉದಾರೀಕರಣದ ನಂತರ ಭಾರತವು ಪಾಶ್ಚಿಮಾತ್ಯ ಮೌಲ್ಯಗಳನ್ನೇ ಅಭಿವೃದ್ಧಿ ಮಾದರಿಯನ್ನು ಒಪ್ಪಿಕೊಂಡಿದೆ.

ಪಾಶ್ಚಾತ್ಯ ಮೌಲ್ಯಗಳು ಸ್ವಭಾತಃ ಭೌತಿಕವಾದುದಾಗಿರುತ್ತವೆ. ಅದು ಕೆಟ್ಟದ್ದೇನಲ್ಲ. ಆದರೆ ಅದಷ್ಟೇ ಸಾಲದು.

ಭಾರತವು ತಂತ್ರಜ್ಞಾನದ ಮೂಲಕ ಸ್ಮಾರ್ಟ್ ನಗರಗಳನ್ನು ಕಲ್ಪಿಸಿಕೊಳ್ಳುತ್ತಿದೆ. ಏಕೆಂದರೆ ನಗರ ಜೀವನದ ಎಲ್ಲ ಸಮಸ್ಯೆಗಳನ್ನೂ ತಂತ್ರಜ್ಞಾನದ ಮೂಲಕ ಪರಿಹರಿಸಬಹುದೆಂದು ನಂಬಿದೆ. ಆದರೆ ಇದು ಸಾಧ್ಯವಿಲ್ಲ. ಸ್ಮಾರ್ಟ್ ನಗರ ಯೋಜನೆ ಒಂದು ರಾಜಕೀಯ ಚಳಕವಲ್ಲದೆ ಮತ್ತೇನೂ ಅಲ್ಲ.

ಇನ್ನು ನದಿಗಳ ಜೋಡಣೆಯ ವಿಚಾರ. ಇಂಥ ಕಲ್ಪನೆಯನ್ನು ಯಾರೇ ಆಗಲಿ ಹೇಗೆ ಮಾಡಬಲ್ಲರು? ನೀವು ಪ್ರಕೃತಿಯ ವಿರುದ್ಧ ಹೋಗಲಾರಿರಿ. ಅಂಥ ಒಂದು ಯೋಜನೆಯು ಎಲ್ಲವನ್ನೂ ಹಾಳುಮಾಡುವುದು. ಯಾವುದೆಲ್ಲ ಸಜೀವವೂ, ಪವಿತ್ರವೂ ಆಗಿದಿಯೋ ಅದನ್ನು ಉಳಿಸಿಕೊಳ್ಳಲೇಬೇಕು. ಅವು ಪ್ರಾಣಿಯಾಗಿರಬಹುದು, ಮಾನವನಾಗಿರಬಹುದು ಅಥವಾ ಮರಗಳಾಗಿರಬಹುದು. ಮುಂದಿನ ಐದು ವರ್ಷಗಳಲ್ಲಿ ಜಾಗತೀಕರಣಗೊಂಡಿರುವ ಜಗತ್ತಿನ ಸಮಸ್ಯೆಗಳು ಉಲ್ಬಣಗೊಳ್ಳುವವು. ಅದರೊಟ್ಟಿಗೆ ಜನಜಾಗೃತಿಯೂ ಆಗುವುದು. ಅದರ ಪರಿಣಾಮವಾಗಿ ಜನರು ಪರ್ಯಾಯವನ್ನು ಹುಡುಕಲು ಪ್ರಾರಂಭಿಸುವರು.

ಪ್ರಾದೇಶಿಕ ಜೈವಿಕತೆವಾದವು ಹೊಸಬಗೆಯ ಚಿಂತನೆಯ ಪ್ರಕ್ರಿಯೆಯಾಗಿದೆ.

ವಿವಿಧ ಪ್ರವೇಶ ದ್ವಾರಗಳ ಮೂಲಕ ಪ್ರವೇಶಪಡೆದು ಹೊಸ ರೀತಿಯ ಸಾಮಾಜಿಕ ಸಂಬಂಧಗಳನ್ನು ರೂಪಿಸುವುದು ಅದರ ಕ್ರಮವಾಗಿದೆ. ಅಲ್ಲಿ ಪ್ರಾದೇಶಿಕತೆ ಮತ್ತು ಅದರೊಂದಿಗೆ ಜಾಗತಿಕ ಪುರಾತತ್ವ ಶಾಸ್ತ್ರಗಳ ಜೋಡಣೆ ಇರುತ್ತದೆ. ಅವುಗಳ ಸಂಯೋಜನೆಯಿಂದ ಹೊಸ ಚಿಂತನೆಗಳು ರಚನೆಯಾಗಿ ಅವುಗಳನ್ನು ವ್ಯವಹಾರಿಕವಾಗಿ ಮತ್ತು ಸ್ಥಳೀಯವಾಗಿ ಪರೀಕ್ಷಿಸಲಾಗುವುದು. ಈ ಪ್ರಕಾರದಲ್ಲಿ ಹೊರಹೊಮ್ಮಿದ ಆವಿಷ್ಕೃತ ವಿಚಾರಗಳನ್ನು ಉಪಯೋಗಿಸಿ ಹೊಸ ಜ್ಞಾನ ಭಂಡಾರವನ್ನೇ ಸೃಷ್ಟಿಸಬಹುದು.

ಪ್ರಾದೇಶಿಕ ಪರಿಸರವಾದ ಒಂದು ಜಾಗತಿಕ ಆಂದೋಲನವೇ ಆಗಬೇಕು. ಆ ಆಂದೋಲನದಲ್ಲಿ ಭಾಗವಹಿಸುವಂಥವರು ಹೊಸ ಸಂಸ್ಥೆಗಳನ್ನು, ಪೌರಸಭೆಗಳನ್ನು ನಿರ್ಮಿಸಬಹುದು. ತನ್ಮೂಲಕ ಪ್ರಕೃತಿಯೊಂದಿಗೆ ಜನರು ಸಮರಸವಾಗಿ ಬದುಕುವ ಹೊಸ ದಾರಿಗಳನ್ನು ಅನ್ವೇಷಿಸುತ್ತಾ ಹೋಗಬಹುದು.

ಸಾಭಾರ- ಡೌನ್‌ಟು ಅರ್ಥ್
(ಏಪ್ರಿಲ್ ೧೬-೩೦)
(ಅನು: ಸು.ಕೌ)

ಕಾಶ್ಮೀರ, ಪಾಕಿಸ್ತಾನ ಮತ್ತು ಭಾರತ

– ಸುರೇಂದ್ರ ಕೌಲಗಿ

೧೯೪೭ರಲ್ಲಿ ದೇಶದ ವಿಭಜನೆಯೊಂದಿಗೆ ಹುಟ್ಟಿದ ಕಾಶ್ಮೀರ ಸಮಸ್ಯೆ ಆರು ದಶಕಗಳ ತರುವಾಯವೂ ಜ್ವಲಂತವಾಗಿಯೇ ಇದೆ. ಕಾಲಕಳೆದಂತೆ ಆ ಸಮಸ್ಯೆ ಸಂಕೀರ್ಣ ಮತ್ತು ಕ್ಲಿಷ್ಟಕರವಾಗುತ್ತಿದೆ. ಅಲ್ಲಿಯ ಯುವಕರು ನಮ್ಮ ಗಡಿಭದ್ರತಾ ಸೈನಿಕರ ಮೇಲೆ ಎಸೆಯುತ್ತಿರುವ ಕಲ್ಲುಗಳು ನಮ್ಮವರಿಗೆ ಗುಂಡುಗಳಾಗಿ ಪರಿಣಮಿಸುತ್ತಿವೆ. ಅದಕ್ಕಾಗಿ ನಮ್ಮ ಸೈನಿಕರು ಕಲ್ಲುತೂರಾಟಗಾರರ ಮೇಲೆ ಪ್ರತಿಯಾಗಿ ಗುಂಡು ಹಾರಿಸುತ್ತಿದ್ದಾರೆ!

ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಲು ಬಹಳಷ್ಟು ಪ್ರಯತ್ನ ನಡೆದಿವೆಯಾದರೂ ಸಮಸ್ಯೆ ಪರಿಹಾರಗೊಂಡಿಲ್ಲ. ಪಾಕಿಸ್ತಾನವು ವಿಶ್ವಸಂಸ್ಥೆ ಅಥವಾ ಇನ್ನಾವುದೇ ದೇಶದ ಮಧ್ಯಸ್ಥಿಕೆ ಒಪ್ಪಲು ಸಿದ್ಧವಿದೆಯಾದರೂ ಭಾರತ ಸಿದ್ಧವಿಲ್ಲ. ಏಕೆಂದರೆ ಪರಸ್ಪರ ಬಗೆಹರಿಸಿಕೊಳ್ಳಬೇಕಾದ ಈ ಸಮಸ್ಯೆಗೆ ಮೂರನೇಯವರ ಮಧ್ಯಸ್ಥಿಕೆ ಬೇಡವೆಂಬುದು ಭಾರತದ ನಿಲುವು. ಆದರೆ ಪಾಕಿಸ್ತಾನದೊಂದಿಗೆ ಸ್ನೇಹ ಮತ್ತು ವಿಶ್ವಾಸಪೂರ್ಣವಾಗಿ ಮಾತನಾಡಲು ಬೇಕಾದಂಥ ಪರಿಸ್ಥಿತಿಯೇ ನಿರ್ಮಾಣವಾಗುತ್ತಿಲ್ಲ. ಮಾತುಕತೆಗೆ ಅಡ್ಡಿಬರುತ್ತಿರುವುದು ಈ ಕಾಶ್ಮೀರ ಸಮಸ್ಯೆಯೇ. ಈ ಸಮಸ್ಯೆ ಬಗೆಹರಿದ ದಿನದಿಂದ ಭಾರತ ಮತ್ತು ಪಾಕ್ ಶಾಂತಿಯಿಂದ ಸಹಬಾಳ್ವೆ ನಡೆಸಬಹುದಷ್ಟೇ ಅಲ್ಲ, ಕಾಲಪಕ್ವವಾದಲ್ಲಿ ಎರಡೂ ದೇಶಗಳು ಒಂದುಗೂಡಿ ಅಖಂಡ ಭಾರತ ನಿರ್ಮಾಣವಾಗಬಹುದು! ಅಂಥ ಒಳ್ಳೆಯ ದಿನಕ್ಕಾಗಿ ನಾವು ಪ್ರಾರ್ಥಿಸೋಣ.

ಪಾಕಿಸ್ತಾನದಲ್ಲಿ ಸಿಹಿಲೇಪಿತ ಪ್ರಜಾಪ್ರಭುತ್ವ ಸೈನ್ಯಾಡಳಿತವಿದೆ. ಭಾರತದಲ್ಲಿ ನೈಜ ಪ್ರಜಾಪ್ರಭುತ್ವವಿದೆ. ಈ ಎರಡು ದೇಶಗಳಲ್ಲಿಯ ಈ ವಿಭಿನ್ನ ಆಡಳಿತ ವ್ಯವಸ್ಥೆಯ ಕಾರಣದಿಂದಾಗಿಯೂ ಕಾಶ್ಮೀರ ಸಮಸ್ಯೆಗೆ ಪರಿಹಾರ ಪಡೆಯುವುದರಲ್ಲಿ ಎರಡೂ ದೇಶಗಳು ವಿಫಲವಾಗುತ್ತಿವೆ. ಪಾಕಿಸ್ತಾನದಲ್ಲಿರುವ ಸೈನ್ಯಾಧಾರಿತ ಸರ್ಕಾರ ಪ್ರತಿಯೊಂದು ಸಮಸ್ಯೆಯನ್ನು ಸೈನ್ಯಬಲದಿಂದಲೆ ಪರಿಹರಿಸಿಕೊಳ್ಳಲು ಯೋಚಿಸುತ್ತದೆ. ನಾಗರೀಕ ಸಂವೇದನೆಯ ವಿಷಯದಲ್ಲಿ ಅದು ಕಠಿಣವಾಗಿ ವರ್ತಿಸುತ್ತದೆ. ಕಾಶ್ಮೀರ ಸಮಸ್ಯೆ ಪೂರ್ಣತಃ ನಾಗರೀಕ ಸಮಸ್ಯೆಯೇ ಹೊರತು ಭೌಗೋಳಿಕ ಅಥವಾ ಮಿಲಿಟರಿ ಸಮಸ್ಯೆಯಲ್ಲ. ನಾಗರೀಕ ಸಮಸ್ಯೆಯನ್ನು ನಾಗರೀಕಪ್ರತಿನಿಧಿಗಳೇ ಬಗೆಹರಿಸಲು ಸಾಧ್ಯ. ಎಲ್ಲಿಯವರೆಗೆ ಪಾಕಿಸ್ತಾನದಲ್ಲಿ ಪೂರ್ಣಪ್ರಮಾಣದ ಪ್ರಜಾಪ್ರಭುತ್ವ ಆಡಳಿತ ಪದ್ಧತಿ ಸ್ಥಾಪಿತವಾಗುವುದಿಲ್ಲವೋ, ಅಲ್ಲಿಯವರೆಗೆ ಕಾಶ್ಮೀರಸಮಸ್ಯೆ ಉಲ್ಬಣಗೊಳ್ಳುತ್ತಲೇ ಹೋಗುತ್ತದೆ. ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ ಪದ್ಧತಿಯನ್ನು ತರಬೇಕಾದವರು ಅಲ್ಲಿಯ ಪ್ರಜೆಗಳೇ ಹೊರತು ಹೊರಗಿನವರಲ್ಲ. ಪಾಕಿಸ್ತಾನದಲ್ಲಿಯ ಯುವಕರು, ವಿದ್ಯಾರ್ಥಿಗಳು,

ಬುದ್ಧಿಜೀವಿಗಳು ಮತ್ತು ರಾಜಕೀಯ ನಾಯಕರು ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ಬಯಸುತ್ತಿದ್ದರೆ ಅವರೆಲ್ಲರೂ ಪಾಕಿಸ್ತಾನದಲ್ಲಿ ಪ್ರಜಾತಾಂತ್ರಿಕ ಆಡಳಿತ ವ್ಯವಸ್ಥೆಯನ್ನು ತರಲು ಸಂಕಲ್ಪ ಬದ್ಧರಾಗಬೇಕು. ಪಾಕಿಸ್ತಾನದಲ್ಲಿಯ ಯುವಕರು ದೇಶ ವಿಭಜನೆಯ ಸಂದರ್ಭದ ಇತಿಹಾಸವನ್ನು ಓದುವುದು ಅಗತ್ಯವಾಗಿದೆ. ೨೧೮ ವರ್ಷಗಳ ನಂತರವೂ ಭಾರತ ಟಿಪ್ಪುಸುಲ್ತಾನನ್ನು ದೇಶಾಭಿಮಾನವನ್ನು ಕೊಂಡಾಡುತ್ತದೆ. ಅಲ್ಪಸಂಖ್ಯಾತರೆಂದು ಭಾವಿಸಲ್ಪಟ್ಟಿರುವ ಮುಸಲ್ಮಾನರು ಯಾವುದೇ ಕ್ಷೇತ್ರದಲ್ಲಿ ಕೀಳರಿಮೆ ಅನುಭವಿಸಬಾರದೆಂಬ ಉದ್ದೇಶದಿಂದ ಗಾಂಧೀಯವರು ತಮ್ಮ ಜೀವನಾದ್ಯಂತ ಹಿಂದೂ–ಮುಸ್ಲಿಂ ಐಕ್ಯತೆಗಾಗಿ ಶ್ರಮಿಸಿದರು. ೧೯೨೪ರಲ್ಲಿ ಅದಕ್ಕಾಗಿ ೨೧ ದಿನಗಳ ಉಪವಾಸ ಮಾಡಿದರು. ಮುಸ್ಲಿಂರ ಭಾವನೆಗೆ ಧಕ್ಕೆ ಉಂಟಾಗಿದ್ದನ್ನು ಸರಿಪಡಿಸಲು 'ಭಾರತ ಬಿಟ್ಟು ತೊಲಗಿ' ಆಂದೋಲನದ ಜೊತೆಗೆ ಕಿಲಾಫತ್ ಆಂದೋಲನವನ್ನೂ ಪ್ರಾರಂಭಿಸಿದರು. ಹಿಂದೂ–ಮುಸ್ಲಿಂರ ಐಕ್ಯತೆಗಾಗಿ ಭಾರತದಲ್ಲಿ ನಡೆದ ಇಂಥ ಎಲ್ಲ ಪ್ರಯೋಗಗಳನ್ನು ನೆನೆದು ಇಂದು ದೇಶದ ಕಷ್ಟಕಾಲದಲ್ಲಿ ಕಾಯ–ವಾಚ–ಮನಸ ಸರ್ಕಾರದ ಬೆಂಬಲಕ್ಕೆ ನಿಲ್ಲಬೇಕಾದುದು ಭಾರತೀಯ ಮುಸಲ್ಮಾನರ ಮೂಲ ಕರ್ತವ್ಯವಾಗಿದೆ. ಆಗ ಯುವಕರಿಗೆ ತಮ್ಮ ಕಲ್ಲುತೂರಾಟದ ದಾರಿ ಎಷ್ಟು ಅಪ್ರಯೋಜಕ ಮತ್ತು ತಾವು ಹೇಗೆ ದಾರಿ ತಪ್ಪುತ್ತಿದ್ದೇವೆ ಎಂಬುದು ಅರಿವಾಗುತ್ತದೆ

ಪಾಕಿಸ್ತಾನದ ರಚನೆಗಾಗಿ ಮೊಹಮ್ಮದ್ಆಲಿಜಿನ್ನಾರವರು "ಡೈರೆಕ್ಟ್ ಆಕ್ಷನ್‌ಗೆ" ಕರೆಕೊಟ್ಟಿದ್ದರು. ಆಗ ಅವರಲ್ಲಿದ್ದ ಹಠಮಾರಿತನದ ಮನೋಭಾವನೆಯನ್ನು ಅರಿತಿದ್ದ ಗಾಂಧೀಜಿಯವರು ದೇಶದ ವಿಭಜನೆಯನ್ನು ತಪ್ಪಿಸುವುದಕ್ಕಾಗಿ ಹಾಗೂ ಮುಸ್ಲಿಂಲೀಗಿನ ವಿಶ್ವಾಸ ಮತ್ತು ಸ್ನೇಹ ಪಡೆಯಲು ಜಿನ್ನಾರವರೇ ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾಗಲೆಂದು ಸಲಹೆ ಕೊಟ್ಟಿದ್ದರು. ಆದರೆ ಜಿನ್ನಾರವರು ತಮ್ಮ ನಿರಂಕುಶ ಅಧಿಕಾರ ಲಾಲಸೆಯ ಮನೋಭಾವದ ಕಾರಣದಿಂದಾಗಿ ಆ ಸಲಹೆಯನ್ನು ಒಪ್ಪದೆ ಪಾಕಿಸ್ತಾನದ ನಿರ್ಮಾಣಕ್ಕಾಗಿ ಭಾರತವನ್ನು ವಿಭಜಿಸಿದರು. ಆಗ ಗಾಂಧೀಯವರ ಸಲಹೆಯಂತೆ ಎಲ್ಲವೂ ನಡೆದುಹೋಗಿದ್ದರೆ ಕಾಶ್ಮೀರ ಸಮಸ್ಯೆಯೇ ಇರುತ್ತಿರಲಿಲ್ಲ. ಇಂದಿನ ಗಡಿನಿಯಂತ್ರಣ ರೇಖೆಯು ಶಾಂತಿಯ ರೇಖೆಯಾಗಿ ಪರಿಣಮಿಸುತ್ತಿತ್ತು.

ಭಾರತದ ವಿಶ್ವಾಸ ಮತ್ತು ಮೈತ್ರಿ ಭಾವನೆಯನ್ನು ಸಂಪಾದಿಸದ ಹೊರೆತು ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲವೆಂಬುದನ್ನು ಪಾಕಿಸ್ತಾನ ಸರ್ಕಾರ ಮತ್ತು ಅದರ ಹಿಂದಿರುವ ಸೈನ್ಯ ವ್ಯವಸ್ಥೆ ತಿಳಿದುಕೊಳ್ಳಬೇಕಾದುದು ಅಗತ್ಯವಾಗಿದೆ. ಇದಕ್ಕೆ ಮೊದಲ ಹೆಜ್ಜೆಯಾಗಿ ಗಡಿ ನಿಯಂತ್ರಣ ರೇಖೆಯ ಉಲ್ಲಂಘನೆ, ಅಪ್ರಚೋದಿತ ಗುಂಡಿನದಾಳಿಯನ್ನು ನಿಲ್ಲಿಸಬೇಕು. ಯಾವುದೇ ಸಮಸ್ಯೆ ಇದ್ದಲ್ಲಿ ಗಡಿಸೈನ್ಯ ಮುಖ್ಯಸ್ಥರು ಮಾತುಕತೆಯ ಮೂಲಕ ಬಿಡಿಸಿಕೊಳ್ಳಬೇಕು. ಇದೆಲ್ಲಕ್ಕಿಂತ ಮುಖ್ಯವಾಗಿ ಸೈನಿಕರ ಶಿರಚ್ಛೇದನ ಮಾಡುವಂಥ ರಾಕ್ಷಸಿ ಕೃತ್ಯವನ್ನು ಬಿಡಬೇಕು. ಶಿರಚ್ಛೇದನ ಮಾಡುವಂತವರು ಕೂಡ ಸ್ವತಃ ಸೈನಿಕರೇ ಆಗಿದ್ದಾರೆ. ಎಲ್ಲ ಸೈನಿಕರ ಜೀವ ಒಂದೇ,

ಭಾವನೆಗಳು ಒಂದೇ, ಅನಿವಾರ್ಯತೆಯೂ ಒಂದೇ, ರಣಾಂಗಣದಲ್ಲಿಯೂ ನೀತಿ–ಧರ್ಮ ಮತ್ತು ಮಾನವೀಯತೆ ಇವೆ ಎಂಬುದನ್ನು ಪಾಕಿಸ್ತಾನದ ಸೈನಿಕರು ತಿಳಿದುಕೊಳ್ಳಬೇಕು.

ಕಾಶ್ಮೀರ ವಿಷಯವಾಗಿ ಪಾಕಿಸ್ತಾನವು ಭಾರತವನ್ನು ಪ್ರಚೋದಿಸುತ್ತ ಹೋದಲ್ಲಿ ಗಂಭೀರ ಪರಿಸ್ಥಿತಿ ಉಂಟಾಗಬಹುದು. ಭಾರತದ ಸಹನೆಗೂ ಒಂದು ಮಿತಿಯಿದೆ. ಪರಸ್ಪರರ ವಿರುದ್ಧ ಮೊದಲು ಯಾರೇ ದಾಳಿ ಮಾಡಿದರೂ ಒಟ್ಟಾರೆ ಯುದ್ಧ ಪ್ರಾರಂಭವಾಗಿ ಎರಡೂ ದೇಶಗಳು ಅಪಾರ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಮೂರನೇ ಮಹಾಯುದ್ಧಕ್ಕೆ ಕಾರಣವಾಗಬಹುದು. ಆ ಭೀಕರ ಯುದ್ಧದ ನಂತರ ಗೆದ್ದವರು ಮತ್ತು ಸೋತವರು ಎಂಬ ಭೇದವಿಲ್ಲದೇ ಇಬ್ಬರೂ ಶೂನ್ಯರಾಗುವಂಥ ಸ್ಥಿತಿ ಬಂದಿರುತ್ತದೆ.

ಯಾವುದೇ ಸಮಸ್ಯೆ ಉದ್ಭವವಾದಲ್ಲಿ ಸರ್ಕಾರಗಳು ಅದನ್ನು ತಮ್ಮದೇ ಆದ ರೀತಿಯಲ್ಲಿ ಬಗೆಹರಿಸಲು ಪ್ರಯತ್ನಿಸುತ್ತವೆಯಾದರೂ ದೇಶದಲ್ಲಿಯ ನಾಗರೀಕರು ಸಹ ಸಮಸ್ಯೆಯ ನಿವಾರಣೆಗೆ ಪ್ರಯತ್ನಿಸಬೇಕಾಗುತ್ತದೆ. ಕೇವಲ ಸರ್ಕಾರದ ಮೇಲೆ ಜವಾಬ್ದಾರಿವಹಿಸಿ ಜನರು ತಟಸ್ಥ ಪ್ರೇಕ್ಷಕರಾಗುವುದು ಸರಿಯಲ್ಲ. ಯಾವುದೇ ಒಂದು ಕ್ರಿಯಾಶೀಲಾ ಸಮಾಜದ ಲಕ್ಷಣ ಸಮಸ್ಯೆಯ ಪರಿಹಾರಕ್ಕಾಗಿ ಸರ್ಕಾರದ ಮೇಲೆ ನೈತಿಕ ಒತ್ತಡ ತರುವುದು. ಅಂಥ ಒಂದು ಕೆಲಸ ಎರಡೂ ದೇಶಗಳಲ್ಲಿಯ ನಾಗರೀಕರು ಮಾಡಬೇಕಾದ ಸಮಯ ಬಂದಿದೆ. ಪಾಕಿಸ್ತಾನವು ತನ್ನನ್ನು ಇಸ್ಲಾಂ ರಾಷ್ಟ್ರವೆಂದು ಘೋಷಿಸಿಕೊಂಡಿದೆ. ಇಸ್ಲಾಂ ಅಂದರೆ ಶಾಂತಿ, ಪ್ರೇಮ, ಸೌಹಾರ್ದತೆ. ಆದರೆ ಪಾಕಿಸ್ತಾನ ಸರ್ಕಾರ ಕಾಶ್ಮೀರ ಸಮಸ್ಯೆಯನ್ನು ಮೊದಲುಗೊಂಡು ಎಲ್ಲ ವಿಚಾರಗಳನ್ನು ಇಸ್ಲಾಂ ಧರ್ಮದ ರಕ್ಷಣೆಯ ದೃಷ್ಟಿಯಿಂದಲೇ ನೋಡುತ್ತದೆ. ಭಾರತವಾದರೋ ಧರ್ಮನಿರುಪೇಕ್ಷ ದೇಶ. ಭಾರತದಲ್ಲಿ ಸುಮಾರು ೪೦ ಕೋಟಿ ಮುಸಲ್ಮಾನರಿದ್ದಾರೆ. ಭಾರತದ ನಾಗರೀಕರಾದ ಈ ೪೦ ಕೋಟಿ ಮುಸ್ಲಿಂರ ಮೇಲೆ ವಿಶೇಷ ಜವಾಬ್ದಾರಿ ಇದೆ. ಅವರು ತಮ್ಮನ್ನು ದೂರದ ಪಾಕಿಸ್ತಾನದ ಪ್ರಜೆಗಳೆಂಬ ಭಾವನೆಯನ್ನು ಹೊಂದದೆ ತಾವು ಭಾರತದ ಪ್ರಜೆಗಳೆಂಬ ಧೃಡ ವಿಶ್ವಾಸ ಇಟ್ಟುಕೊಂಡು ಕಾಶ್ಮೀರ ವಿಷಯದಲ್ಲಿ ಪಾಕಿಸ್ತಾನ ನಡೆದುಕೊಳ್ಳುತ್ತಿರುವ ರೀತಿಯ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಬೇಕು. ಭಾರತೀಯ ಸೈನಿಕರ ಶಿರಚ್ಛೇದದಂತಹ ಹೇಯ ಕೃತ್ಯವನ್ನು ಖಂಡಿಸಬೇಕು. ಸರ್ಕಾರಗಳ ಮೇಲೆ ಎರಡೂ ದೇಶಗಳ ಸಮಾಜ ಒತ್ತಡ ತಂದು ಕಾಶ್ಮೀರ ಸಮಸ್ಯೆಯನ್ನು ಕೂಡಲೇ ಬಗೆಹರಿಸುವಂತೆ ಮಾಡಬೇಕು. ಜನತೆಯ ಎಲ್ಲ ಪ್ರಯತ್ನಗಳ ನಡುವೆಯೂ ಭಾರತ ಸರ್ಕಾರಕ್ಕೆ ತನಗೆ ಸರಿದೋರುವ ನಿಲುವನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯ ಇದ್ದೇ ಇರುತ್ತದೆ.

ಭೂಮಿಯನ್ನು ಉಳಿಸಿಕೊಳ್ಳುವ ಬಗೆ

–ಡಿ.ಎಸ್. ನಾಗಭೂಷಣ

ಭೂದಿನ ಎಂಬುದು ವಿಜ್ಞಾನವನ್ನು ನೆನಪಿಸಿಕೊಳ್ಳುವಂತಹ ವಿಪರ್ಯಾಸದ ದಿನವಾಗದೆ ಗಾಂಧಿಯನ್ನು ನೆನಪಿಸಿಕೊಳ್ಳುವ–ಇಂದಿಗೆ ಸಾಕ್ಷಾತ್ಕರಿಸಿಕೊಳ್ಳುವ–ದಿನವಾಗಬೇಕು.

ಈ ಭೂಮಿಯ ಮೇಲಿನ ಮಾನವರ ಬದುಕು ಇನ್ನೊಂದು ನೂರು ವರ್ಷ ಮಾತ್ರ ಎಂಬ ವಿಜ್ಞಾನಿ ಸ್ಟೀಫನ್ ಹಾಕಿಂಗ್ ಅವರ ಮಾತು ಇಂದು ಜಗತ್ತಿನ ಎಲ್ಲ ಕಡೆ ಅನುರಣಿಸುತ್ತಿದೆ. 'ಪ್ರಜಾವಾಣಿ' ಪತ್ರಿಕೆಯಲ್ಲೇ ಇದು ಒಂದು ವಾರದಲ್ಲಿ ಪೃಥ್ವಿ ದತ್ತ ಚಂದ್ರ ಶೋಭಿ ಅವರ 'ನಿಜದನಿ' (೧೨.೫.೨೦೧೭) ಮತ್ತು ನಾಗೇಶ್ ಹೆಗಡೆಯವರ 'ವಿಜ್ಞಾನ ವಿಶೇಷ' (೧೮.೫.೨೦೧೭) ಅಂಕಣಗಳಲ್ಲಿ ವಿಸ್ತಾರವಾಗಿ ಚರ್ಚೆಯಾಗಿದೆ. ಭೂಮಿ ಕುರಿತ ಈ ಆತಂಕಕ್ಕೆ ಪೃಥ್ವಿ ಅವರು ಮುಖ್ಯವಾಗಿ ಮನುಷ್ಯ ಈಗ ಅಭಿವೃದ್ಧಿಪಡಿಸುತ್ತಿರುವ ಕೃತಕ ಬುದ್ಧಿಮತ್ತೆಯನ್ನು ಕಾರಣವಾಗಿ ನೀಡಿದ್ದರೆ, ನಾಗೇಶ್ ಹೆಗಡೆಯವರು ಹೆಚ್ಚುತ್ತಿರುವ ಭೂಮಿಯ ತಾಪಮಾನದ ಕಾರಣ ನೀಡಿದ್ದಾರೆ. ಹೆಗಡೆಯವರು ಈ ಸಂಬಂಧ ತಮ್ಮ ವಿಶ್ಲೇಷಣೆಯನ್ನು ಮುಂದುವರೆಸಿ, ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಜ್ಞಾನ ವಿರೋಧಿ ರಾಜಕಾರಣದ ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಇದರ ಮುಂದುವರಿಕೆ ಯಾಗಿ, ಕಳೆದ ಏಪ್ರಿಲ್ ೨೨ರ ಭೂದಿನಾಚರಣೆಯಂದು ಹಲವು ದೇಶಗಳು ವಿಜ್ಞಾನಪರ ದಿನವನ್ನಾಗಿ ಆಚರಿಸಿದ್ದರ ಮಾಹಿತಿ ನೀಡಿದ್ದಾರೆ.

ಆದರೆ ಕೃತಕ ಬುದ್ಧಿಮತ್ತೆಯ ಅಭಿವೃದ್ಧಿ ಅಥವಾ ಭೂ ತಾಪಮಾನದ ಹೆಚ್ಚಳಕ್ಕೆ ಕಾರಣವಾಗುತ್ತಿರುವ ಚಟುವಟಿಕೆಗಳಿಗೆ ವಿಜ್ಞಾನವನ್ನು ಆಧುನಿಕ ಕಾಲದಲ್ಲಿ ಪರಿಕಲ್ಪಿಸಿಕೊಂಡ ಮತ್ತು ಬಳಸಿದ ರೀತಿ–ನೀತಿಗಳೇ ಕಾರಣವಲ್ಲವೇ ಎಂಬ ಪ್ರಶ್ನೆಯನ್ನೂ ನಾವಿಂದು ಕೇಳಿಕೊಳ್ಳಬೇಕಿದೆಯೆಂದು ನನಗನ್ನಿಸುತ್ತಿದೆ. ಈ ದಿಕ್ಕಿನಲ್ಲಿ ಯೋಚಿಸಿದಾಗ ಡೊನಾಲ್ಡ್ ಟ್ರಂಪ್ ಕೂಡ ಇಂತಹ ವಿಜ್ಞಾನ ಪರಿಗ್ರಹಿಕೆಯ ಉತ್ಪನ್ನವೇ ಎಂಬುದು ಗೊತ್ತಾಗುತ್ತದೆ. ಜ್ಞಾನವು ವಿ-ಘಟಿಸಿಕೊಂಡು ವಿ–ಜ್ಞಾನವಾದದ್ದು ಪಶ್ಚಿಮದ ದೇಶಗಳಲ್ಲಿ ೧೫–೧೭ನೇ ಶತಮಾನಗಳಲ್ಲಿ ಸಂಭವಿಸಿತೆಂದು ಹೇಳಲಾಗುವ ಪುನರುಜ್ಜೀವನ (Rennaissance) ಯುಗದಲ್ಲಿ. ಇದಕ್ಕೆ ಮುಂಚೆ ಜಗತ್ತು ಅಜ್ಞಾನದಲ್ಲಿ

ಮುಳುಗಿಹೋಗಿತ್ತೇನೋ ಎಂಬಂತೆ ಇದನ್ನು ಜ್ಞಾನಯುಗವೆಂದೂ ಕರೆಯಲಾಗುತ್ತದೆ. ಇದೇ 'ಜ್ಞಾನಯುಗ'ದ ರಾಜಕಾರಣದ ಮೊದಲ ಮತ್ತು ನಿರ್ಣಾಯಕ ಮೆಟ್ಟಿಲು. ಅದೇನೇ ಇರಲಿ, ಈ ಯುಗವು ವಿಶ್ವವನ್ನು ತಾನು ಪಡೆದುಕೊಂಡ ಹೊಸ ಜ್ಞಾನವನ್ನು ವಿಶ್ವವನ್ನು ಜೀವ ವಿಕಾಸದ ಹಾದಿಯಲ್ಲಿ ತನಗೆ ಜನ್ಮ ಕೊಟ್ಟು ಸಾಕಿದ 'ತಾಯಿ'ಯೆಂದು ಪರಿಗ್ರಹಿಸದೆ ತಾನು ಅರಿತು ಸೂರೆ ಮಾಡಬೇಕಾದ 'ವಸ್ತು' ಮಾತ್ರವೆಂದು ಪರಿಗಣಿಸಿ, ಅದನ್ನು ವಿಜ್ಞಾನಶಾಸ್ತ್ರವೆಂದು ಕರೆಯಿತು. ಜ್ಞಾನದ ಅನಾಧ್ಯತ್ಮೀಕರಣ (ಅಂದರೆ ಗಾತ್ರೀಕರಣ) ಆರಂಭವಾಯಿತು.

ಅಂದಿನಿಂದ ಇಂದಿನವರೆಗೆ ಈ ವಿಜ್ಞಾನವೆಂಬ ಆಧುನಿಕ ಜ್ಞಾನವು ಮನುಷ್ಯನ ಬದುಕನ್ನು ಹೆಚ್ಚೆಚ್ಚು ಸುಖಮಯಗೊಳಿಸುವ ನೆಪದಲ್ಲಿ (ಇದನ್ನು ಆಧುನಿಕ ನಾಗರೀಕತೆ ಎಂದೂ ಕರೆಯಲಾಗಿದೆ.) ಭೂಮಿಯ ಮೇಲೆ ಪರಿಪರಿಯ ದೌರ್ಜನ್ಯಗಳನ್ನೆಸಗಲಾಗುತ್ತಿದೆ. ಇದೆಲ್ಲವನ್ನೂ ಎಸಗಲಾಗುತ್ತಿರುವುದು ಮನುಷ್ಯನ ಆಜನ್ಮಸಿದ್ಧ ಹಕ್ಕೆಂದು ಹೇಳಲಾಗುತ್ತಿರುವ ಅಪರಿಮಿತವಾದ ಸುಖಜೀವನವನ್ನು ಅವನಿಗೆ ಕಲ್ಪಿಸುವ ಸದುದ್ದೇಶದ ಹೆಸರಿನಲ್ಲಿ. ಇದಕ್ಕಾಗಿ, ವಿಜ್ಞಾನ ಒಂದು ಸರ್ವಜ್ಞ ಜ್ಞಾನವಾಗಿದ್ದು ಮನುಷ್ಯ ಎದುರಿಸಬೇಕಾಗಿ ಬರುವ ಎಲ್ಲ ತೊಂದರೆಗಳಿಗೂ ಇದರಲ್ಲಿ ಪರಿಹಾರವಿದ್ದೇ ಇದೆ ಎಂಬ ಒಂದು ಆಧುನಿಕ ಮೌಢ್ಯವನ್ನು ಸೃಷ್ಟಿಸಲಾಗಿದೆ. ಇದು, ಭೂಮಿಯ ಮೇಲೆ ಎಸಗಲಾಗುತ್ತಿರುವುದು ದೌರ್ಜನ್ಯವೆಂಬ ಅರಿವೇ ಉಂಟಾಗದಷ್ಟು ನಮ್ಮ ಸಂವೇದನೆಗಳನ್ನು ಜಡಗೊಳಿಸಿಬಿಟ್ಟಿದೆ. ವಿಜ್ಞಾನದ ಹೆಸರಿನಲ್ಲಿ ಬೆಳೆಸಲಾದ ಇಂತಹ ಚಿಂತನೆಯ ಸಧ್ಯದ ಫಲವೇ ಡೊನಾಲ್ಡ್ ಟ್ರಂಪ್ ಎಂದು ಹೇಳಬಹುದು. ಈತನನ್ನು ಆಧುನಿಕ ನಾಗರೀಕತೆಯ ತರ್ಕದನುಸಾರ ಮೂಡಿದ ರಾಜಕಾರಣದ ಒಂದು ದುಷ್ಫಲವೆಂದೂ ಕರೆಯಬಹುದೇನೋ!

ಆದರೆ ಆಧುನಿಕ ನಾಗರೀಕತೆಯ ಮರುಳು ಎಂತಹುದೆಂದರೆ, ಅದರ ಹೆಮ್ಮೆಯ ಪ್ರಜೆಗಳಾಗಿ ನಮ್ಮ ಪ್ರತಿಯೊಬ್ಬರಲ್ಲೂ ಒಬ್ಬ ಟ್ರಂಪ್ ಇರುವುದು ಸಹಜವೇ ಆಗಿಬಿಟ್ಟಿದೆ! ಹಾಗಾಗಿಯೇ ಕಳೆದ ಅರವತ್ತು ವರ್ಷಗಳಿಂದೀಚೆಗೆ ಜೀವ ಪರಿಸರ ವಿಜ್ಞಾನವೆಂಬ ಹೊಸ ಜ್ಞಾನಶಿಸ್ತು ಬೆಳೆದು, ಜೀವಜಗತ್ತಿಗೆ ಮಾರಕವಾಗುತ್ತಿರುವ ರೀತಿಯಲ್ಲಿ ಜಗತ್ತಿನ ಜೀವಪರಿಸರ ಸಮತೋಲನ ನಾಶವಾಗುತ್ತಿರುವ ಬಗ್ಗೆ ಎಚ್ಚರಿಕೆಗಳನ್ನು ನೀಡುತ್ತಿದ್ದರೂ, ನಮಗಾರಿಗೂ ನಮ್ಮ ಬದುಕಿನ ಸುಖ-ಸಂಪತ್ತುಗಳ ಬಗ್ಗೆ ಹೊಸ ಎಚ್ಚರವೇ ಮೂಡದಾಗಿದೆ. ಇದರ ಭಾಗವಾಗಿಯೇ ನಾಗೇಶ್ ಹೆಗಡೆಯವರು (ಉದಾಹರಣೆಯಾಗಿ 'ಪಾತಾಳ

ಗಂಗೆ' ವಿಷಯದಲ್ಲಿ) ಹೇಳುವ ನಮ್ಮ ವಿಜ್ಞಾನಿಗಳ 'ಸರ್ಕಾರಿ' ವರ್ತನೆಯನ್ನು ಅರ್ಥಮಾಡಿಕೊಳ್ಳಬೇಕಿದೆ. ಹಾಗೇ ಸಚಿವ ಕಾಗೋಡು ತಿಮ್ಮಪ್ಪನವರು ಇತ್ತೀಚೆಗೆ ನೀಡಿದ 'ಅರಣ್ಯ ಇಲಾಖೆ ನೆಟ್ಟ ಸಸಿಗಳನ್ನು ಕಿತ್ತು ಬಿಸಾಡಿ' ಎಂಬ 'ಜನಪರ' ಕರೆಯನ್ನೂ ಸಹ. (ಈ ಮಹಾಶಯರ ಪ್ರಕಾರ ಈ ಭೂಮಿ ಇರುವುದು ಮೊದಲು ಮನುಷ್ಯನಿಗಾಗಿ; ಆನಂತರ ಪ್ರಾಣಿ ಪಕ್ಷಿಗಳಿಗಾಗಿ! ವಿಜ್ಞಾನ ಕೊಟ್ಟ ಸುಖ ಮನುಷ್ಯನಲ್ಲಿ ವಿಕಾಸದ ಕ್ರಮವನ್ನೇ ಹೇಗೆ ತಿರುಗುಮುರುಗಾಗಿಸಿದೆ ನೋಡಿ!!) ನಮ್ಮ ವಿಜಾನಿಗಳೂ, ನಮ್ಮ ರಾಜಕಾರಣಿಗಳೂ ನಮ್ಮಂತೆಯೇ ಮನುಷ್ಯರು ತಾನೆ? ಅವರಿಬ್ಬರೂ ಸೇರಿ ಆಧುನಿಕ ಕಾಲದ 'ಭಲೇ ಜೋಡಿ' ಎನಿಸಿಕೊಂಡಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ನೋಡಿದಾಗ ಈ ವಿಜ್ಞಾನದ, ಈ ರಾಜಕಾರಣದ ಅತಿಗಳಾಗಲೀ, ಜೀವ ಪರಿಸರಶಾಸ್ತ್ರವೆಂಬುದರ ಹೆಸರಾಗಲೀ ಇಲ್ಲದ ಕಾಲದಲ್ಲಿ– ಸುಮಾರು ನೂರು ವರ್ಷಗಳ ಹಿಂದೆಯೇ–ಮಹಾತ್ಮ ಗಾಂಧಿ ಈ ಎಲ್ಲ ಆತಂಕಗಳನ್ನು ಮುನ್ನೋಡಿದಂತೆ ಪ್ರವಾದಿತ್ವ ಜ್ಞಾನದ್ದು ಎನ್ನಬಹುದಾದ ಒಂದು ಮಾತನ್ನಾಡಿದ್ದರು. ಅದೇ, 'ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ'. ಗಾಂಧಿಯವರ ಈ ಮಾತನ್ನು ನಾವೆಲ್ಲ ಆಗಾಗ್ಗೆ ಸರಳ ಜೀವನದ ಆದರ್ಶದ ಒಣ ಭಾಷಣ ಮಾಡಲು ಉಲ್ಲೇಖಿಸುತ್ತೇವೆಯೇ ಹೊರತು, ಅದರಲ್ಲಿ ಅಡಗಿದ್ದ ಆಧುನಿಕ ನಾಗರೀಕತೆ, ಆಧುನಿಕ ಜ್ಞಾನವೆನಿಸಿದ ವಿಜ್ಞಾನ ಮತ್ತು ಅವು ಪ್ರಚೋದಿಸುವ ಆಧುನಿಕ ಬದುಕಿನ ಮಾದರಿ ಕುರಿತ ಅಪೂರ್ವವೆನಿಸುವ ವೈಚಾರಿಕ ಒಳನೋಟ ಮತ್ತು ರಚನಾತ್ಮಕ ವಿಮರ್ಶೆಯನ್ನು ಗಮನಿಸಲು ನಿರಾಕರಿಸಿದ್ದೇವೆ. ಅವರನ್ನು ಜಗತ್ತನ್ನು ಹಿಂದಕ್ಕೆಳೆಯಬಯಸುವ 'ಸನಾತನಿ' ಎಂದೂ ಟೀಕಿಸುತ್ತಾ ಬಂದಿದ್ದೇವೆ. ಜಗತ್‌ವಿನಾಶಕ 'ಅಭಿವೃದ್ಧಿ'ಯ ಹಾದಿಯಲ್ಲಿ ಮುಂದೆ ಸಾಗಿದ್ದೇವೆ.

ಹಾಗಾಗಿಯೇ ನಾವು, ಗಾಂಧಿ ಭೂಮಿಯ ಮೇಲಿನ ಬದುಕಿಗೇ ತಂದೊಡ್ಡಿರುವ ಇಂದಿನ ಆತಂಕವನ್ನು ಒಂದು ಶತಮಾನದಷ್ಟು ಹಿಂದೆಯೇ ಹೇಗೆ ಮುನ್ನೋಡಬಲ್ಲವರಾಗಿದ್ದರು ಎಂಬುದರ ಬಗ್ಗೆ ಚಿಂತಿಸಲೇ ಹೋಗಿಲ್ಲ. ಗಾಂಧಿ ಈ ಮಾತನ್ನಾಡಿದ್ದು ಮುಗಿಯದ ತರ್ಕಕ್ಕೆ ಕಾರಣವಾಗುವ (ಕಾರ್ಯ– ಕಾರಣ ಸಂಬಂದದ) ವೈಜ್ಞಾನಿಕ ಚಿಂತನೆಯಿಂದಲೂ ಅಲ್ಲ; ಅಥವಾ ನೈತಿಕತೆಯನ್ನು ಕುರಿತ ಸಿನಿಕ ಚರ್ಚೆಗೆ ಕಾರಣವಾಗುವ ಧಾರ್ಮಿಕ ಚಿಂತನೆಯಿಂದಲೂ ಅಲ್ಲ. ಬದಲಿಗೆ ಆ ಮಾತುಗಳು ಮೂಡಿದ್ದು, ಅವರಿಗೆ ವೈಯಕ್ತಿಕ ಅನುಭವವಾಗಿದ್ದ, ಅವರಲ್ಲಿ ಬಹು ಹಿಂಸೆಗೆ ಕಾರಣವಾಗಿದ್ದ, ವ್ಯಕ್ತಿಯ

ಸ್ವಾಯತ್ತತೆಯ (ಅಂದರೆ ಅವನ ಜನ್ಮಸಿದ್ಧ ಹಕ್ಕಾದ ಬಂಧಮುಕ್ತತೆಯ ಸುಖದ) ನಾಶದ ಪ್ರಶ್ನೆ ಕುರಿತು ಅವರು ಮಾಡಿದ ಚಿಂತನೆಯ ಭಾಗವಾಗಿ. ಅವರು ಆ ಪ್ರಶ್ನೆಯ ಹಿಂದೆ ಬಿದ್ದು, ಆ ಹಿಂಸೆಯ ಕಾರಣಗಳನ್ನು ಹುಡುಕುತ್ತಾ ಹೋಗಿ, ಅವನ್ನು ಅಂತಿಮವಾಗಿ ಕಂಡದ್ದು 'ಪ್ರಭುತ್ವ' ಎಂಬ ನಾಗರಿಕ ರಚನೆಯ ಸ್ವರೂಪದಲ್ಲಿ ಗಾಂಧಿಯವರ ಅಹಿಂಸೆಯ ಚಿಂತನೆಗೆ ಆಧಾರವಾದ ಮೂಲಪ್ರಮೇಯವಿದು. ಅವರು ವಸಾಹತುಶಾಹಿಯ ವಿರುದ್ಧ ರೂಪಿಸಿದ (ಸ್ವಾತಂತ್ರ್ಯ) ಹೋರಾಟಕ್ಕೂ ಅದೇ ಕಾರಣ: ಅದು ಹಿಂಸಾತ್ಮಕವಾಗಿದೆ ಎಂಬುದು. ಅದರ ಈ ಹಿಂಸಾತ್ಮಕತೆಗೆ ಕಾರಣವಾಗಿರುವುದು, ಅದು ಆಧುನಿಕ ವಿಜ್ಞಾನ ಪ್ರೇರಿತ ತಂತ್ರಜ್ಞಾನವನ್ನು ತನ್ನ ಸಾಧನವನ್ನಾಗಿ ಬಳಸಿಕೊಂಡೇ ತನ್ನನ್ನು ರಚಿಸಿಕೊಂಡಿರುವುದು, ಅದೇ ಮನುಷ್ಯನ ಅಗತ್ಯ ಮತ್ತು ಆಸೆಗಳ ಗಡಿಗೆರೆಗಳನ್ನು ನಾಶ ಮಾಡಿರುವುದು ಎಂಬುದು. ಗಾಂಧಿಯವರ 'ಸ್ವರಾಜ್ಯ' ಕಲ್ಪನೆ ಇಂತಹ ಪ್ರಭುತ್ವವನ್ನು ಮುರಿದು (ಅಧಿಕಾರದ ಗರಿಷ್ಠ ವಿಕೇಂದ್ರೀಕರಣದ ಮೂಲಕ ಅಹಿಂಸಾತ್ಮಕ ಪ್ರಭುತ್ವವನ್ನು) ಕಟ್ಟುವ ಪ್ರಯೋಗವಾಗಿತ್ತು ಎಂಬುದನ್ನೂ ನಾವು ಇಲ್ಲಿ ಗಮನಿಸಬೇಕು. ಅವರ ಬೀಜ ಕೃತಿಯೆನಿಸಿರುವ 'ಹಿಂದ್ ಸ್ವರಾಜ್'ನ ಸಾರಾಂಶವಾದರೂ ಇದೇ ಆಗಿದೆ.

ಇದು ಗಾಂಧಿಯವರು ಆಧುನಿಕ ವಿ(ಅಂದರೆ, ಒಡೆದು ನೋಡುವ)-ಜ್ಞಾನಕ್ಕೆ ಬದಲಿಯಾಗಿ ಅಳವಡಿಸಿಕೊಂಡ ಸ-ಮ್ಯಕ್ (ಅಂದರೆ ಸಮಗ್ರ) ಜ್ಞಾನದಿಂದ ಪಡೆದ ದ್ರಷ್ಟಾರತೆ. ಹಾಗಾಗಿ ನಾವಿಂದು ಆಧುನಿಕ ಕಾಲದ ಹಿಂಸೆಯಿಂದ ಪಾರಾಗಬೇಕಾದರೆ, ವಿಜ್ಞಾನವನ್ನು ಸಮ್ಯಕ್ ಜ್ಞಾನದ ಭಾಗವಾಗಿ ಮಾಡುವ ಬಗೆಗಳಾವುವು ಎಂಬುದರ ಬಗ್ಗೆ ಯೋಚಿಸಬೇಕಿದೆ. ಅಂದರೆ ಇದು, ವಿಜ್ಞಾನಕ್ಕೆ ಗಾಂಧಿ ಕಲ್ಪಿಸಿಕೊಟ್ಟ ಅಹಿಂಸೆಯ ದೀಕ್ಷೆ ಕೊಡುವುದೇ ಆಗಿದೆ. ಆಗ ಬಹುಶಃ (ಈಗ ಜಡವಾಗಿರುವ) ವಿಜ್ಞಾನಕ್ಕೂ ಒಂದು ಆತ್ಮ ಮೂಡಿ, ಅದಕ್ಕೆ ಆತ್ಮ ಸಾಕ್ಷಿ ಎಂಬ ಸಂವೇದನೆಯೊಂದು ಜಾಗೃತವಾಗಬಹುದು. ಅದರಿಂದ ಮನುಷ್ಯ ತನ್ನ ಆಸೆ ಮತ್ತು ಅಗತ್ಯಗಳ ದ್ವಂದ್ವವನ್ನು ಪರಿಹರಿಸಿಕೊಳ್ಳುವ ಒಂದು ಒರೆಗಲ್ಲು ಅವನೊಳಗೇ ರೂಪುಗೊಳ್ಳಬಹುದು. ಅದರ ಪರಿಣಾಮವಾಗಿ ಅವನಲ್ಲಿ ಭೂಮಿಗೆ ಒಂದು ಅಳತೆ (ಮಿತಿ) ಇದ್ದಂತೆ, ಅದರಿಂದ ಮನುಷ್ಯ ಪಡೆಯಬಹುದಾದ ಸುಖ-ಸೌಲಭ್ಯಗಳಿಗೂ ಒಂದು ಅಳತೆ (ಮಿತಿ) ಇರಲೇಬೇಕು ಎಂಬ ಸತ್ಯ ಗೋಚರವಾಗಬಹುದು. ಈ ಸತ್ಯ ಒಮ್ಮೆ ಮನುಷ್ಯನ ಮನಸ್ಸಿನಲ್ಲಿ ಸ್ಥಾಪಿತವಾದರೆ, ಆಧುನಿಕ ನಾಗರೀಕತೆಯ (ಆರ್ಥಿಕ ಚಕ್ರದ ನಿರಂತರ ಚಲನೆಯ) ಚಾಲಕ ಶಕ್ತಿ ಎನಿಸಿರುವ ಮನುಷ್ಯನ ಮಿತಿ ಇಲ್ಲದ ಸುಖ-ಸೌಲಭ್ಯಗಳ ಆಸೆಗೂ

ಒಂದು ಮಿತಿ ಇರಲೇಬೇಕಾಗುತ್ತದೆ ಎಂಬ ವಿವೇಕ ಉದಯವಾಗುತ್ತದೆ. ಆ ವಿವೇಕದ ದಿನ ನಿತ್ಯದ ಅನುಷ್ಠಾನ ರೂಪವೆಂದರೆ ಮನುಷ್ಯ ತನ್ನ ಅಗತ್ಯಗಳನ್ನಲ್ಲದಿದ್ದರೂ ಆಸೆಗಳನ್ನು ತಹಬಂದಿಗೆ ತಂದುಕೊಳ್ಳುವುದು.

ಇದು ಸಾಧ್ಯವಾಗುವಂತಹ ಮನಸ್ಸಿನ ತರಬೇತಿ ಇಂದಿನ ಅಗತ್ಯವಾಗಿದೆ. ಇದಕ್ಕೆ ಪೂರಕವಾದ ಜೀವಪರಿಸರ ಶಿಕ್ಷಣದ ಪಾಠಗಳನ್ನು ನಾವು ರೂಪಿಸಿ ನಮ್ಮ ಎಲ್ಲ ಹಂತಗಳ ಶಿಕ್ಷಣ ಕ್ರಮದಲ್ಲಿ ಅವಿಭಾಜ್ಯವಾಗಿ ಅಳವಡಿಸಬೇಕಿದೆ. ಆ ಮೂಲಕ ಹೊಸ ತಲೆಮಾರಿನ ಮಕ್ಕಳು ಮತ್ತು ಯುವಜನರಲ್ಲಾದರೂ ಮಿತಿಗಳುಳ್ಳ ಬದುಕಿನ ಅಗತ್ಯ ಮತ್ತು ಸಾರ್ಥಕತೆಗಳ ಅರಿವನ್ನು ಮೂಡಿಸಬೇಕಿದೆ. ಈಗ ಕೆಲ ಗಾಂಧಿವಾದಿಗಳೆನಿಸಿಕೊಂಡವರು ಮಾಡುತ್ತಿರುವ ಸರಳ ಜೀವನದ ಬೋಳು ಬೋಧನೆಯಿಂದಾಗಲೀ ಅಥವಾ ಯಂತ್ರ ಅಥವಾ ತಂತ್ರಜ್ಞಾನದ ವಿರುದ್ಧ ನೇರ ದಾಳಿ ಮಾಡುತ್ತಾ ಶ್ರಮಜೀವನದ ಪ್ರತಿಪಾದನೆ ಮಾಡುವುದರಿಂದಾಗಲೀ ಗಾಂಧಿಯನ್ನು ನಮ್ಮ ಕಾಲಕ್ಕೆ ಪ್ರಸ್ತುತಗೊಳಿಸಿಕೊಳ್ಳಲಾಗುವುದಿಲ್ಲ. ಹಾಗೆ ಮಾಡಿದರೆ ನಮಗೆ ದೊರೆಯುವುದು ಆ ಕಾಲದ ಪಳಯುಳಿಕೆಯ ರೂಪದ ಗಾಂಧಿಯೇ ಹೊರತು ಇಂದಿನ ನಮಗೆ ಬೇಕಾದ ಗಾಂಧಿ ಅಲ್ಲ.

ಏಕೆಂದರೆ, ಇಂದಿನ ಸಂದರ್ಭದಲ್ಲಿ ಸರಳ ಜೀವನವು ತ್ಯಾಗವನ್ನು ಬೇಡುತ್ತದೆ ಮತ್ತು ಅಂತಹ ತ್ಯಾಗಕ್ಕೆ ಮಹಾ ಕಾರಣವೂ ಇರಬೇಕಾಗುತ್ತದೆ. ಹಾಗೇ ಯಂತ್ರಗಳ ಬೇಡ, ಶ್ರಮ ಜೀವನ ಅಗತ್ಯ ಎನ್ನಲೂ ಮಹಾ ಕಾರಣಗಳು ಬೇಕಾಗುತ್ತವೆ. ಸರಳ ಜೀವನವಾಗಲೀ, ಶ್ರಮಜೀವನವಾಗಲೀ ಇಂದು ಸ್ವಸಮರ್ಥನೀಯ ತತ್ವವಾಗಿ ಅಥವಾ ಒಂದು ಪವಿತ್ರ ಜೀವನ ಮೌಲ್ಯವಾಗಿ ಚಾಲ್ತಿಗೆ ಬರಲಾಗದು. ನಾವು ನಿಂತಿರುವ ನೆಲವೇ ಕುಸಿಯುತ್ತಿದೆ ಎಂಬುದರ ಅರಿವನ್ನಾದರೂ ಉಂಟು ಮಾಡಿದರೆ ಮಾತ್ರ ಇವು ತುರ್ತು ಅಗತ್ಯಗಳಾಗಿ ಕಂಡಾವು.

ಹಾಗೆ ನೋಡಿದರೆ ಈಗ ಪ್ರತಿದಿನವೂ ಭೂದಿನಾಚರಣೆಯ ದಿನವಾಗಬೇಕು. ಬಹುಶಃ ಇದೇ ನಾವು ಮಾಡಬಹುದಾದ, ಭೂಮಿಯನ್ನು ಉಳಿಸಿಕೊಳ್ಳುವ ಕೊನೆಯ ಪ್ರಯತ್ನವಾಗಬಹುದು.

●

ಹೂವುಗಳು

–ಡಾ॥ ಹೆಚ್. ಪಾಂಡುರಂಗ ವಿಠಲ

ಸಸ್ಯಗಳಲ್ಲಿ ಹೂವು ಕಾಣಿಸಿಕೊಂಡದ್ದು ಹನ್ನೊಂದು ಕೋಟಿ ವರ್ಷಗಳ ಹಿಂದೆ. ಮೊದಲು ಅತ್ಯಂತ ವಿರಳವಾಗಿದ್ದ ಹೂವುಗಳು ಸರಿಯಾದ ವಾತಾವರಣ ಸಿಕ್ಕೊಡನೆ ಎಲ್ಲೆಲ್ಲೂ ಕಾಣಿಸಿಕೊಳ್ಳತೊಡಗಿದುವು. ವರ್ಣ ವೈಭವದ, ನವಿರು ಪರಿಮಳದ ಹೂಗಳೇ ಸಸ್ಯದ ಸಾರವತ್ತಾದ ಭಾಗವೆಂದು ಮಾನವನ ಸೌಂದರ್ಯ ದೃಷ್ಟಿ ಗುರುತಿಸಿತು. ಶುಭ ಸಂದರ್ಭಗಳಲ್ಲಿ ಅವನ್ನು ಬಳಸಲು ತೊಡಗಿದನು. ಸ್ವಲ್ಪ ಕಾಲದಲ್ಲೆ ಹೂವು ಕಾಯಾಗುತ್ತದೆ, ಕಾಯಿ ಹಣ್ಣಾಗುತ್ತದೆ, ಹಣ್ಣಿನ ಬೀಜ ಪುನಃ ಸಸ್ಯವಾಗಿ ಮೊಳಕೆ ಒಡೆಯುತ್ತದೆ. ಹೂವು ಜೀವನದ ನಾಂದಿಯ ಸಂಕೇತ; ಹೊಸಬಾಳಿನ ಭರವಸೆ. ಮಕ್ಕಳಿಗೆ ಹೂವನ್ನು ಹೋಲಿಸುವುದು ಸಾಮಾನ್ಯ. ಒರಟು ಕಾಂಡ, ಎಲೆಗಳ ಗಿಡದ ತುದಿಯಲ್ಲಿನ ಹೂವು ಅತ್ಯಂತ ಮೃದು, ಹಗುರ. ಸಸ್ಯದ ಎಲ್ಲ ಭಾಗಗಳಿಗಿಂತಲೂ ಭಿನ್ನ. ಎಲ್ಲರ ಗಮನ ಸೆಳೆಯುತ್ತ ತನ್ನ ಕಂಪನ್ನು ಹರಡುತ್ತದೆ. ಮಕ್ಕಳೂ ಹೀಗೇ ತಾನೇ! ಹೂಗಳ ಮೇಲೆ ಧ್ಯಾನಿಸಿ ಹೇಗೆ ಬದುಕಬೇಕು ಎಂಬುದನ್ನು ತಿಳಿಯಬೇಕು ಎನ್ನುತ್ತಾನೆ ಕ್ರಿಸ್ತ. ಬುದ್ಧ ಒಮ್ಮೆ ಮೌನ ಪ್ರವಚನ ನೀಡಿದನಂತೆ. ಹೂವು ಒಂದನ್ನು ಎತ್ತಿ ಹಿಡಿದು ಅದನ್ನೇ ದೃಷ್ಟಿಸುತ್ತಿದ್ದನಂತೆ. ದೀರ್ಘಕಾಲ ನಡೆದ ಈ ಪ್ರವಚನವನ್ನು ಮಹಾಕಸ್ಸಪ ಮಾತ್ರ ಅರ್ಥ ಮಾಡಿಕೊಂಡು ಮುಗುಳ್ನಗೆ ಬೀರಿದನಂತೆ. ಆ ಮುಗುಳ್ನಗೆಯ ಸಾಕ್ಷಾತ್ಕಾರ ಮುಂದೆ ಇಪ್ಪತ್ತೆಂಟು ತಲೆಯ ವರೆಗೆ ಜೆನ್ ಸಂಪ್ರದಾಯವಾಗಿ ಹರಿದು ಬಂದಿತಂತೆ.

ಜೀವಿಗಳ ವೃಕ್ಷದಲ್ಲಿ ಮಾನವನೇ ತುತ್ತತುದಿಯ ಹೂವಾಗಿದ್ದಾನೆ. ಅವನ ವ್ಯಕ್ತಿತ್ವದ ಮುಖ್ಯ ಭಾಗ ಸೌಂದರ್ಯವೇ. ನಾವು ಗೌರವಿಸುವ, ಪವಿತ್ರವೆಂದು ತಿಳಿಯುವ, ನಿರಾಕಾರವಾದ ನಮ್ಮ ಚೈತನ್ಯದ ಯಾವುದೋ ಒಂದು ಭಾಗದ ಸಂಕೇತವಾಗಿ ಹೂವನ್ನು ಕಂಡು ದೇವರಿಗೆ ಅದನ್ನು ಅರ್ಪಿಸುತ್ತೇವೆ; ನಮ್ಮನ್ನು ನಿರ್ಮಿಸಿದ ದೇವರಿಗೆ ಪುಷ್ಪಾರ್ಚನೆಯನ್ನು ಮಾಡುತ್ತ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಎಕ್‌ಹಾರ್ಟ್ ಟೊಲೆ ಸಸ್ಯದ ಜ್ಞಾನೋದಯವೇ ಹೂಗಳು ಎನ್ನುತ್ತಾನೆ. ಇದೇ ರೀತಿ ಕಠಿನ ಶಿಲೆಗಳು ಸ್ಫಟಿಕವಾಗುವುದು, ಸರೀಸೃಪಗಳಿಂದ ಪಕ್ಷಿಗಳ ವಿಕಾಸ ಇವೂ ಭೂ ಜ್ಞಾನೋದಯದ ರೀತಿಗಳೇ. ಜೀವಿಯ ಪ್ರಜ್ಞೆಗೆ ಇವು ಹೊಸ ಆಯಾಮ ನೀಡುವ ವಿಚಾರಗಳು. ತನ್ನ ಸತ್ವವನ್ನು ಅರಿತುಕೊಂಡ

ಮಾನವ ಅತಿಮಾನವನಾಗುತ್ತಾನೆ ಎನ್ನುತ್ತಾರೆ ಅರವಿಂದರು. ಹೂವು, ಸ್ಫಟಿಕ, ಗುರುತ್ವಾಕರ್ಷಣೆಯನ್ನು ಮೀರಿ ಹಾರಾಡುವ ಪಕ್ಷಿಗಳು ಇವೆಲ್ಲ ಬರೀ ಭೌತಿಕ ಅಸ್ತಿತ್ವದ ವೈವಿಧ್ಯಗಳಲ್ಲ. ಅಸ್ತಿತ್ವಕ್ಕೂ ಮಿಗಿಲಾದ ಏನೋ ಒಂದಾಗಿರುವುದರಿಂದಲೇ ಸಾಮಾನ್ಯರೂ ಅವುಗಳಲ್ಲಿ ವಿಶೇಷವಿರುವುದನ್ನು ಗಮನಿಸುತ್ತಾರೆ. ಅವುಗಳ ಹೊರ ರೂಪದಿಂದ ಅವರು ಆಕರ್ಷಿತರಾಗಿಲ್ಲ; ಒಳಗಿನ ಚೈತನ್ಯ ಅವರನ್ನು ಬೆರಗಾಗಿಸಿದೆ. ತುಂಬಾ ಸೂಕ್ಷ್ಮವೂ ಹಗುರವೂ ಆದ ಎಳೆಯ ಮಕ್ಕಳು, ಪ್ರಾಣಿಗಳ ಮರಿಗಳು, ಚಿಗುರು ಇವು ತಮ್ಮ ಮುಗ್ಧತೆಯಿಂದ, ಸೌಂದರ್ಯದಿಂದ ಎಲ್ಲರನ್ನೂ ಆಕರ್ಷಿಸುತ್ತವೆ. ನಿರಾಕಾರದ ಚೈತನ್ಯದೆಡೆ ನಮ್ಮ ಗಮನ ಹರಿಸುವ ಬೆಳಕಿಂಡಿಗಳಾಗಿ ಇವು ಕೆಲಸ ಮಾಡುತ್ತವೆ. 'ವನಸುಮದೊಲೆನ್ನ ಜೀವನವು ವಿಕಸಿಸುವಂತೆ ಮನವನನುಗೊಳಿಸು ಗುರುವೇ ಹೇ ದೇವ' ಎಂಬ ಅನಿಸಿಕೆ ಡಿವಿಜಿಯವರದು. ಮರ ಹೇಗೆ ತನ್ನ ಫಲಗಳು ಬೇರೆಯವರಿಗಾಗಿ ಎಂದು ಭಾವಿಸುತ್ತದೆಯೋ ಹಾಗೆಯೇ ತನ್ನ ಬದುಕೂ ಇರಬೇಕೆನ್ನುವುದು ಅವರ ಆಶಯ.

ಹೂಗಳಿಂದ ಅಲಂಕರಿಸಿ ಮಾಡುವ ಪೂಜೆಗಿಂತ ಗುಣಗಳನ್ನು ಬೆಳೆಸಿ ಮಾಡುವ ಪೂಜೆ ಸಾರ್ಥಕವಾದದ್ದು ಎನ್ನುತ್ತಾನೆ ಚೆನ್ನಬಸವಣ್ಣ. 'ಸರ್ವ ಜೀವಂಗಳಲ್ಲಿ ಹಿಂಸೆ ಮಾಡದಿರಬಲ್ಲಡೆ ಪ್ರಥಮ ಪುಷ್ಪ. ಸರ್ವೇಂದ್ರಿಯಂಗಳ ನಿಗ್ರಹಿಸಿಕೊಂಡಿರಬಲ್ಲಡೆ ದ್ವಿತೀಯ ಪುಷ್ಪ. ಸರ್ವಾಹಂಕಾರವ ಮರೆತು ಶಾಂತನಾಗಿರಬಲ್ಲಡೆ ತೃತೀಯ ಪುಷ್ಪ. ಸರ್ವವ್ಯಾಪಾರವಳಿದು ನಿರ್ವ್ಯಾಪಾರಿಯಾಗಿರಬಲ್ಲಡೆ ಚತುರ್ಥ ಪುಷ್ಪ. ದುರ್ಭಾವ ಪ್ರಕೃತಿ ಕಳೆದು ಸದ್ಭಾವಮನೆಡೆಗೊಂಡಿರಬಲ್ಲಡೆ ಪಂಚಮ ಪುಷ್ಪ. ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಯಾಗಿರಬಲ್ಲಡೆ ಷಷ್ಠಮ ಪುಷ್ಪ. ಅನೃತವ ಮರೆತು ಸತ್ಯ ನುಡಿಯಬಲ್ಲಡೆ ಸಪ್ತಮ ಪುಷ್ಪ. ಸಕಲ ಪ್ರಪಂಚಜ್ಞಾನವರೆದು ಶಿವಜ್ಞಾನ ಸಂಪನ್ನನಾಗಿರಬಲ್ಲಡೆ ಅಷ್ಟಮ ಪುಷ್ಪ. ಇಂತೀ ಅಷ್ಟದಳ ಕುಸುಮಂಗಳ ಹೃದಯಕಮಲದಲ್ಲರಳಿಸಿ ಸಹಜ ಪೂಜೆಯ ಮಾಡಬಲ್ಲ ಶರಣರು ನಿಮ್ಮ ಪ್ರತಿಬಿಂಬದಂತಿಪ್ಪರು ಕೂಡಲಸಂಗಮದೇವಾ.' ಈ ಎಂಟು ಪುಷ್ಪಗಳು ಅರಳಿರುವ ಜಂಗಮನು ದೇವನೇ ಎಂದೆನ್ನುತ್ತಾನೆ ಚೆನ್ನಬಸವಣ್ಣ. ಹೂವು ನಮ್ಮಲ್ಲಿ ನಮ್ಮ ಸತ್ವವನ್ನು ಅರಳಿಸಲಿ. ●

ಸರ್ವೋದಯ ಆಂದೋಲನ ಮುನ್ನಡೆ

ಗಾಂಧೀಜಿಯವರು ನಡೆಸಿದ ಚಂಪಾರಣ್ ಸತ್ಯಾಗ್ರಹಕ್ಕೆ ನೂರು ವರ್ಷಗಳಾದ ಸಂದರ್ಭದಲ್ಲಿ ಬಿಹಾರ್ ರಾಜ್ಯದ ರಾಜಧಾನಿ ಪಟ್ನದಲ್ಲಿ ಒಂದು ರಾಷ್ಟ್ರೀಯ ಸಮಾವೇಶ ನಡೆಯಿತು. ಅದು ನಡೆದುದು ೨೦೧೭ ಏಪ್ರಿಲ್ ೧೦ ಮತ್ತು ೧೧. ಅದರ ಉದ್ದೇಶ ದೇಶದಲ್ಲಿ ವರ್ಷಾದ್ಯಂತ ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ ತೀರ್ಮಾನಿಸುವುದಾಗಿತ್ತು. ಸಮಾವೇಶದಲ್ಲಿ ಮೂರು ತಲೆಮಾರಿನ ಗಾಂಧೀ ವಿಚಾರವಾದಿಗಳು ಸೇರಿದ್ದರು. ಪ್ರಸ್ತುತ ಪರಿಸ್ಥಿತಿಯಲ್ಲಿ ಗಾಂಧೀ ವಿಚಾರಗಳನ್ನು ಅನ್ವಯಿಸುವ ಬಗ್ಗೆ ಹಾಗೂ ಅವುಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಚರ್ಚೆ ನಡೆಯಿತು ಮತ್ತು ಆತ್ಮಶೋಧನೆಯೂ ನಡೆಯಿತು. ಸಮಾವೇಶವು ಹತ್ತು ಅಂಶಗಳನ್ನೊಳಗೊಂಡ ಘೋಷಣಾ ಪತ್ರದೊಂದಿಗೆ ಮುಕ್ತಾಯಗೊಂಡಿತು. ಆ ಘೋಷಣೆಗೆ ಪಟ್ನ ಘೋಷಣೆಯೆಂದೇ ಹೆಸರಿಸಲಾಗಿದೆ. ಸಮಾವೇಶದ ಉದ್ಘಾಟನಾ ಕಾರ್ಯಕ್ರಮದಲ್ಲಿ ರಾಜೇಂದ್ರ ಸಾಚಾರ್, ಚಂದ್ರಶೇಖರ್ ಧರ್ಮಾಧಿಕಾರಿ, ಎಸ್. ಸುಬ್ಬರಾವ್, ಮೇಧಾಪಾಟ್‌ಕರ್, ರಜಿಅಹಮ್ಮದ್, ಕುಮಾರ್‌ಪ್ರಶಾಂತ್, ಅಶೋಕಚೌಧರಿ ಮತ್ತು ಅಧಿತಿ ದೇಸಾಯಿ ಮುಂತಾದವರು ಮಾತನಾಡಿದರು. ಸಮಾವೇಶದಲ್ಲಿ ಭಾಗಿಯಾದವರನ್ನು ಬಿಹಾರ್ ರಾಜ್ಯದ ಮುಖ್ಯಮಂತ್ರಿ ನಿತೀಶ್‌ಕುಮಾರ್‌ರವರು ಸ್ವಾಗತಿಸಿದರು. ಗಾಂಧೀಜಿಯವರು ಕಲ್ಪಿಸಿಕೊಂಡಿದ್ದ ವಿಕಾಸ ಮತ್ತು ನ್ಯಾಯ ಎಂಬ ತತ್ವವನ್ನು ಆಧಾರವಾಗಿಟ್ಟುಕೊಂಡು ಭಯ, ದಬಾವಣೆ, ಶೋಷಣೆ ಮತ್ತು ಬಡತನವನ್ನು ಹೋಗಲಾಡಿಸುವುದರ ಮೂಲಕ ದೇಶವನ್ನು ಮುನ್ನಡೆಸುವ ಬಗ್ಗೆ ಮಾರ್ಗಸೂಚಿಯನ್ನು ತಯಾರಿಸಬೇಕೆಂದು ನಿತೀಶ್‌ಕುಮಾರ್ ತಮ್ಮ ಭಾಷಣದಲ್ಲಿ ಕರೆ ಕೊಟ್ಟರು. ಅಲ್ಲದೇ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ರಚನಾತ್ಮಕ ಕಾರ್ಯಕ್ರಮಗಳ ಮೌಲ್ಯವನ್ನು ಅವರು ಎತ್ತಿ ಹೇಳಿದರು. ಬಿಹಾರ್ ಸರ್ಕಾರವು ಮದ್ಯಪಾನ ನಿಷೇಧದ ಕಾನೂನಿನೊಂದಿಗೆ ಮತ್ತು ಬರಿಸುವ ಇತರ ಪದಾರ್ಥಗಳ ನಿಷೇಧದ ಬಗ್ಗೆಯೂ ಹಾಗೂ ವರದಕ್ಷಿಣೆಯ ನಿಷೇಧದ ಬಗ್ಗೆಯೂ ಆಲೋಚಿಸುತ್ತಿರುವುದಾಗಿ ನಿತೀಶ್‌ಕುಮಾರ್ ಹೇಳಿದರು. ಸಮಾವೇಶದ ಚರ್ಚಾಗೋಷ್ಠಿಗಳು ವಿವಿಧ ಮೂರು ಭವನಗಳಲ್ಲಿ ನಡೆದವು. ಆ ಮೂರು ಭವನಗಳ; ಹೆಸರು ರಾಜಕುಮಾರಶುಕ್ಲ, ಕಸ್ತೂರಿಬಾಗಾಂಧಿ ಮತ್ತು ಫೀಕ್‌ಮೊಹಮ್ಮದ್‌ಮುನಿಸ್. ಈ ಮೂವರೂ ಚಂಪಾರಣ್ಯ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದಂಥವರು. ಚರ್ಚಾಗೋಷ್ಠಿಗಳಿಗೆ

ತಾರಾಗಾಂಧಿಭಟ್ಟಾಚಾರ್‌ಜೀ, ರಜೀಅಹಮ್ಮದ್, ವಂದನಾಶಿವ, ಮಣಿಮಾಲಾ, ತುಷಾರ್‌ಗಾಂಧಿ, ಕುಮಾರ ಕೇತ್‌ಕರ್ ಮತ್ತು ಆನಂದಕುಮಾರ್ ಮುಂತಾದ ವಿಚಾರವಂತ ವ್ಯಕ್ತಿಗಳು ಅಧ್ಯಕ್ಷತೆ ವಹಿಸಿದ್ದರು. ಸುಮಾರು ನಲವತ್ತು ವಿಚಾರಪೂರ್ಣ ಪ್ರಬಂಧಗಳು ಅಧಿವೇಶನದಲ್ಲಿ ಮಂಡಿಸಲ್ಪಟ್ಟವು. ಸಮಾವೇಶದಲ್ಲಿ ವಿವಿಧ ಬಗೆಯ ಗಾಂಧಿ ವಿಚಾರಚಿಂತಕರು ಒಟ್ಟುಗೂಡಿದ್ದರು. ಗಾಂಧಿ ವಿಚಾರಗಳನ್ನು ಪಾಲಿಸುವವರು, ಸಾಮಾಜಿಕ ಕ್ರಿಯಾಶೀಲರು ಮತ್ತು ಶಿಕ್ಷಣತಜ್ಞರು ಭಾಗವಹಿಸಿದ್ದರು. ಚರ್ಚೆಯಲ್ಲಿ ಗಾಂಧೀವಾದಿಗಳಲ್ಲದೆ ಮಾರ್ಕ್ಸ್‌ವಾದಿಗಳು, ಸಮಾಜವಾದಿಗಳು, ಪರಿಸರವಾದಿಗಳು, ಮಹಿಳಾ ಸಮಾನತೆಯವಾದಿಗಳು ಹಾಗೂ ಪುರೋಗಾಮಿ ಮಾನವತಾವಾದಿಗಳು ಭಾಗವಹಿಸಿ ನಡೆಸಿದ ಚರ್ಚೆಯನ್ನು ಕೇಳುವುದೇ ಒಂದು ವಿಶೇಷ ಅನುಭವವಾಗಿತ್ತು. ಈ ಎಲ್ಲ ಒಂಭತ್ತು ಅಧಿವೇಶನಗಳ ಸಂಕ್ಷಿಪ್ತ ವರದಿಯನ್ನು ಪ್ರೊ॥ ಪುರುಷೋತ್ತಮ ಅಗರ್‌ವಾಲ್‌ರವರು ಮಂಡಿಸಿದರು. ಚರ್ಚೆಗಳ ಸಾರವನ್ನು ತುಷಾರ್ ಗಾಂಧಿಯವರು ಓದಿ ಹೇಳಿದರು. ಅದನ್ನೆ ಅವರು ಹತ್ತು ಅಂಶದ ಪಟ್ನ ಘೋಷಣೆಯೆಂದು ಹೇಳಿ ಸಮಾವೇಶವನ್ನು ಮುಕ್ತಾಯಗೊಳಿಸಿದರು.

ವರದಿ–ಆನಂದ್‌ಕುಮಾರ್
ಸಾಭಾರ–ಜನತಾ

ನಾಲ್ಕು ನಿಟ್ಟಿನಿಂದ...

ಗಾಂಧೀಯನ್ನು ಎಡಪಂಥೀಯರೂ, ರಾಜಕೀಯ ಬಲಪಂಥೀಯರೂ ಟೀಕಿಸಿದರು. ಆದರೆ ಅಂಬೇಡ್ಕರ್ ಒಬ್ಬರನ್ನು ಹೊರತುಪಡಿಸಿದರೆ ಗಾಂಧೀಯನ್ನು ಟೀಕಿಸಿದ ಯಾರೂ ದೇಶಕ್ಕೆ ನೆಮ್ಮದಿ ತರುವ ಕೆಲಸ ಮಾಡಲಿಲ್ಲ. ಎಲ್ಲ ಟೀಕೆಗಳ ನಡುವೆಯೂ ದೇಶಕ್ಕೆ ಸ್ವಲ್ಪ ನೆಮ್ಮದಿ ತರುವ ಕೆಲಸವನ್ನು ಮಾಡಿದ್ದು ಮಹಾತ್ಮ ಗಾಂಧಿ ಅವರೇ. *** ಅರವಿಂದ ಚೊಕ್ಕಾಡಿ**

***

ವಿಜ್ಞಾನವನ್ನು ಕನ್ನಡ ಭಾಷೆಯಲ್ಲಿ ಕಲಿಯುವುದು ಕಷ್ಟವೇನು ಅಲ್ಲ. ಆರಂಭದಲ್ಲಿ ತೊಡಕು ಆಗಬಹುದು. ಕ್ರಮೇಣ ಸರಿ ಹೋಗುತ್ತದೆ. ಇಂಗ್ಲೀಷ್ ಮಾಧ್ಯಮಕ್ಕೆ ಸೇರುವ ವಿದ್ಯಾರ್ಥಿಗೆ ಪ್ರಾರಂಭದಲ್ಲಿ ಎಲ್ಲ ಇಂಗ್ಲೀಷ್ ಪದಗಳು, ತಾಂತ್ರಿಕ ಪದಗಳು ಗೊತ್ತಿರುತ್ತವೆಯೇ. ಈ ಪದಗಳೆಲ್ಲ ಹೊಸತೇ ಆಗಿರುತ್ತವಲ್ಲವೇ? ಸತತ ಕಲಿಕೆಯಿಂದ ಪರಿಪೂರ್ಣತೆ ಪಡೆಯಬಹುದು. ವಿಜ್ಞಾನ ವಿಷಯವನ್ನು ಇಂಗ್ಲೀಷ್‌ನಲ್ಲಿ ಯೋಚಿಸುವುದಕ್ಕಿಂತ ಕನ್ನಡದಲ್ಲಿ ಯೋಚಿಸಬೇಕು. ನಮ್ಮ ಯೋಚನಾ ವಿಧಾನವೇ ಬದಲಾಗಬೇಕು. ಒಮ್ಮೆ ಇದು ಸಾಧ್ಯವಾದರೆ, ಕನ್ನಡದಲ್ಲಿ ವಿಜ್ಞಾನ ಕಲಿಕೆ ಮತ್ತು ಅದಕ್ಕೆ ಸಂಬಂಧಿಸಿದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವುದು ಕಷ್ಟವಲ್ಲ.

*** ಶ್ರೀಕಾಂತ್ ಶಾಸ್ತ್ರಿ, ಭೌತವಿಜ್ಞಾನಿ**
ಇವರನ್ನು ಸಂದರ್ಶಿಸಿದವರು ಎಸ್. ರವಿಪ್ರಕಾಶ್

***

ವಿಶ್ವವಿದ್ಯಾಲಯದ ಪಠ್ಯದ ಮೇಲೆ ಕಣ್ಣು ಹಾಯಿಸಿದಾಗಲೆಲ್ಲ ನನಗೆ ಇದೆಲ್ಲ ವಿಧ್ವಂಸಕ ಜ್ಞಾನ ಎನಿಸೋದು. ವಿಶ್ವವಿದ್ಯಾಲಯದಲ್ಲಿ ಜೀವನ್ಮುಖಿಯಾದ ಜ್ಞಾನ ಸಿಗಲಾರದು ಎನ್ನವುದು ನನ್ನ ಖಚಿತ ಭಾವನೆ. ಉದಾಹರಣೆಗೆ ಎಂಜಿನಿಯರ್‌ಗಳು ಹೆಚ್ಚಾದಷ್ಟೂ ಪರ್ವತಗಳು ಕರಗುತ್ತವೆ. ಫಲವತ್ತಾದ ಭೂಮಿಯಲ್ಲೂ ಕಾಂಕ್ರೀಟ್ ಕಟ್ಟಡಗಳು ತಲೆ ಎತ್ತುತ್ತವೆ. ಅಂದರೆ, ಪರಿಸರದ ಮತ್ತಷ್ಟು ವಿನಾಶ. ನೀವು ವಿಶ್ವವಿದ್ಯಾಲಯದಲ್ಲಿ ಕೃಷಿಯ ವಿಷಯವಾಗಿಯೇ ಕಲಿಯುತ್ತೀರಿ ಎಂದುಕೊಳ್ಳಿ. ಭೂಮಿಗೆ ಹೇಗೆ ವಿಷ ಉಣಿಸುವುದು, ನೀರನ್ನು ಹೇಗೆ ಹಾಳು ಮಾಡುವುದು ಇದನ್ನೇ ಅಲ್ಲವೇ, ನೀವು ಕಲಿಯುವುದು.? ನಮ್ಮ ಒಂದೊಂದು ಕ್ರಿಯೆಯೂ ಬಲುಸಂಕೀರ್ಣ, ಅದರಿಂದ ನಮ್ಮ ಸುತ್ತಲಿನ ಎಲ್ಲವನ್ನೂ ನಾವು ಹಾಳು ಮಾಡುತ್ತೇವೆ. ಕಳಿಣಗೊಳಿಸುತ್ತೇವೆ ಎನ್ನವುದು ನನ್ನ ಬಲವಾದ ನಂಬಿಕೆ. *** ಜಾನ್-ಜಂದಾಯ್**

ಸಾದರ – ಸ್ವೀಕಾರ

ಪುಸ್ತಕದ ಹೆಸರು	:	ದೇ.ಜ.ಗೌ ಕೊನೆಯ ದಿನಗಳು
ಲೇಖಕರು	:	ಯಶಿಕ
ಪ್ರಕಾಶಕರು	:	ಶ್ರೀ ಅಕ್ಷಯ ಪ್ರಕಾಶನ ನಂ ೨೨೬೫/೨೮. ಬಿ ೬ನೇ ಅಡ್ಡ ರಸ್ತೆ, ಮನೇ ಮುಖ್ಯ ರಸ್ತೆ, ವಿನಾಯಕ ನಗರ, (ಪಡುವಾರಳ್ಳಿ), ಮೈಸೂರು – ೧೨
ಪುಟ	:	೨೧೬
ಬೆಲೆ	:	೧೫೦ ರೂ

ಕನ್ನಡದ ಕಟ್ಟಾಳು ಮತ್ತು ರಾಷ್ಟ್ರಕವಿ ಕುವೆಂಪುರವರ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದ ಮತ್ತು ದೇಜವರೇಗೌಡರ ವ್ಯಕ್ತಿತ್ವದಿಂದ ಪ್ರಭಾವಿತರಾಗಿ, ಯಶೋಧಾ ಶಿವರಾಮುರವರು ದೇಜಗೌರವರ ಆತ್ಮೀಯರ ವರ್ತೂಲದ ಸದಸ್ಯೆಯಾಗಿ ದೇಜಗೌ ಕೊನೆಯ ದಿನಗಳು ಎಂಬ ಪುಸ್ತಕವನ್ನು ಬರೆದಿದ್ದಾರೆ. ದೇಜಗೌ ಅವರ ಕನ್ನಡಾಭಿಮಾನದಿಂದ ಪ್ರಭಾವಿತರಾದ ಯಶೋಧ ಶಿವರಾಮುರವರು ತಮ್ಮ ಹೆಸರಿನ ಮುಂದೆ ಕನ್ನಡತಿ ಎಂಬ ಹೆಸರನ್ನು ಸೇರಿಸಿಕೊಂಡು ಯಶಿಕಾ ಎಂಬ ಹೆಸರಿನಿಂದ ಈ ಪುಸ್ತಕವನ್ನು ಬರೆದಿದ್ದಾರೆ.

ಯಶೋಧಾರವರು ದೇಜಗೌ ರವರಿಗೆ ಮಾಡಿದ ಅಂತಃಕರಣ ಯುಕ್ತ ಸೇವೆಯನ್ನು ನೆನೆದು ದೇಜಗೌ ಯಶೋಧಾರವರಿಗೆ ಅವ್ವ ಎಂಬ ಪದವಿಯನ್ನು ಕೊಟ್ಟರು. ತಾವು ಹೇಗೆ ಮತ್ತು ಯಾವೆಲ್ಲಾ ಕಾರಣಗಳಿಂದ ದೇಜಗೌ ರವರ ಅವ್ವನ ಪದವಿಗೇರಿರರೆಂಬುದನ್ನು ಯಶೋಧ ಶಿವರಾಮುರವರು ತಮ್ಮ ಪುಸ್ತಕದಲ್ಲಿ ಸವಿಸ್ತಾರವಾಗಿ ಉದಾಹರಣೆಗಳೊಂದಿಗೆ ತಿಳಿಸಿದ್ದಾರೆ. ಹೇಗೆ ಎರಡು ಆತ್ಮಗಳು ಅದ್ವೈತವನ್ನು ಸಾಧಿಸುತ್ತವೆ ಎಂಬುದಕ್ಕೆ ನಿದರ್ಶನವಾಗಿ ಈ ಪುಸ್ತಕವಿದೆ. ವ್ಯಕ್ತಿ ಸಂಬಂಧಗಳು ಹೇಗೆ ಶುದ್ಧ ಆತ್ಮೀಯತೆಯ ಉತ್ತುಂಗಕ್ಕೇರುತ್ತದೆ ಎಂಬುದನ್ನು ತಿಳಿಯ ಬಯಸುವ ಸಾಧಕರಿಗೆ ಈ ಪುಸ್ತಕ ಆಸಕ್ತದಾಯಕವಾಗುತ್ತದೆ.

***

ಪುಸ್ತಕದ ಹೆಸರು	:	ಕನ್ನಡದ ಮನಸ್ಸು ಮತ್ತು ಇತರ ಲೇಖನಗಳು
ಲೇಖಕರು	:	ಡಿ. ಎಸ್. ನಾಗಭೂಷಣ್
ಪ್ರಕಾಶಕರು	:	ಅಭಿರುಚಿ ಪ್ರಕಾಶನ ಮೈಸೂರು
ಪುಟ	:	೧೯೩
ಬೆಲೆ	:	೧೫೦ರೂ

"ಸಮಕಾಲೀನ ವಿಷಯಗಳನ್ನು ಕುರಿತಂತೆ"ಚರ್ಚೆಗೆ ಸಾಧ್ಯವಾಗುವ ಮಾಲಿಕೆಯಲ್ಲಿ ಎರಡನೆ ಪುಸ್ತಕವಾಗಿ ಮೇಲ್ಕಾಣಿಸಿದ ಪುಸ್ತಕ ಪ್ರಕಟಗೊಂಡಿದೆ. ಮಾಲಿಕೆಯ ಧ್ಯೇಯದ್ದೇಶಗಳನ್ನು ಮತ್ತು ಲೇಖಕರನ್ನು ಕುರಿತು ಟಿ.ಎಸ್. ವೇಣುಗೋಪಾಲ್‌ರವರ ಸೊಗಸಾದ ಮುನ್ನುಡಿ ಇದೆ. ಪುಸ್ತಕದಲ್ಲಿ ಮುಖ್ಯವಾಗಿ ಹತ್ತು ಲೇಖನಗಳಿವೆ. (ಇನ್ನು ಕೆಲವು ಫೇಸ್‌ಬುಕ್ ಬರಹಗಳಿವೆ.) ಇವುಗಳಲ್ಲಿ ಪ್ರಧಾನವಾದ ಎರಡು ಲೇಖನಗಳೆಂದರೇ ಕನ್ನಡ ಮನಸ್ಸು; ಸ್ವಪ್ನ ಮತ್ತು ದುಸ್ವಪ್ನಗಳು ಮತ್ತು ಎರಡನೇಯದು ಅಂಬೇಡ್ಕರ್ ಮತ್ತು ಲೋಹಿಯಾ: ಒಂದು ತುಲನಾತ್ಮಕ ನೋಟ.

ನಾಗಾಭೂಷಣ್ ರವರು ತಮ್ಮದೇ ಆದ ವಿಶಿಷ್ಟ ಚಿಂತನೆಯ ಫಲವಾಗಿ ಇವೆರಡು ಲೇಖನಗಳಲ್ಲಿ ವಿಷಯಕ್ಕೆ ಸಂಬಂಧಿಸಿದ ಹಾಗೆ ಅನೇಕ ಒಳನೋಟಗಳನ್ನು ಪ್ರಸ್ಥಾಪಿಸಿದ್ದಾರೆ. ಎಲ್ಲ ಲೇಖನಗಳನ್ನು ಪ್ರಬುದ್ಧ ಚಿಂತನೆಯ ಫಲವಾಗಿ ಮೂಡಿ ಬಂದಿವೆ. ವಿಚಾರಗಳ ಪ್ರತಿಪಾದನೆಯೊಂದಿಗೆ ಕನ್ನಡದ ಭಾಷೆಯ ಕಸುವೂ ವ್ಯಕ್ತವಾಗುತ್ತದೆ. ಪ್ರಚಲಿತ ವಿಷಯಗಳ ಬಗ್ಗೆ ಚಿಂತನೆ ಮಾಡುವ ಯುವ ಬರಹಗಾರರಿಗೆ ಈ ಪುಸ್ತಕ ಮಾದರಿಯಾಗಿದೆ.

***

ಪುಸ್ತಕದ ಹೆಸರು	:	ಹೊನ್ನಾಳಿಯ ಹೊನ್ನು (ಶ್ರದ್ಧಾಂಜಲಿಯ ಗ್ರಂಥ)
ಲೇಖಕರು	:	ಎಚ್.ಡಿ. ಶೈಲಜಾ
ಪ್ರಕಾಶಕರು	:	ಪ್ರಭುದೇವ ಪ್ರಕಾಶನ, ನಂ ೨೨೩, ೧೨ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ, ಸರಸಪತಿ ಪುರಂ, ಮೈಸೂರು-೯
ಬೆಲೆ	:	೩೦೦ರೂ
ಪುಟ	:	೩೩೬

ಈ ಶ್ರದ್ಧಾಂಜಲಿಯ ಗ್ರಂಥದ ಸಂಪಾದಕರಾದ ಎಚ್.ಟಿ. ಶೈಲಜಾರವರು ತಮ್ಮ ತಂದೆ ಡಾ॥ಎಚ್. ತಿಪ್ಪೆರುದ್ರಸ್ವಾಮಿ ಮತ್ತು ತಾಯಿ ಗೌರಮ್ಮ. ಇವರ ಚಿರಸ್ಮರಣೆಗಾಗಿ ಈ ಕೃತಿಯನ್ನು ಅರ್ಪಿಸಿದ್ದಾರೆ. ಶೈಲಜಾ ಅವರೊಂದಿಗೆ ಸಹೋದರ-ಸಹೋದರಿಯರಾದ ನಿರ್ಮಲಾ ಮತ್ತು ಪ್ರಭುದೇವ ಅವರು ಕೂಡ ಸಹಭಾಗಿಯಾಗಿದ್ದಾರೆ. ಡಾ॥ತಿಪ್ಪೇರುದ್ರಸ್ವಾಮಿಯವರು ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಹೆಚ್ಚಿನವು ವಚನಾಸಾಹಿತ್ಯಕ್ಕೆ ಸಂಬಂಧಿಸುದಾಗಿದೆ. ಅವರು ವಿಮರ್ಶಕ, ಸಂಶೋಧಕ ಸಂಸ್ಕೃತಿಚಿಂತಕ ಮತ್ತು ಉತ್ತಮ ವಾಗ್ಮಿ ಆಗಿದ್ದರು. ಗಾಂಧೀವಿಚಾರದಲ್ಲಿ ವಿಶೇಷ ಶ್ರದ್ಧೆ ಇಟ್ಟಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ಅವರು ಸುಸಂಸ್ಕೃತ ಸನ್ನಡತೆಯ ಸತ್‌ಚಾರಿತ್ರ್ಯದ ವ್ಯಕ್ತಿಯಾಗಿದ್ದರು. ಕನ್ನಡ ನಾಡಿನ ರಾಯಭಾರಿಯಂತಿದ್ದರು. ಡಾ॥ ತಿಪ್ಪೇರುದ್ರಸ್ವಾಮಿಯನ್ನು ಕುರಿತಾದ ಲೇಖನಗಳು ಮತ್ತು ಇತರ ಸಾಹಿತ್ಯ ಈ ಪುಸ್ತಕದಲ್ಲಿವೆ. ಎಚ್.ಜೆ. ಶೈಲಜಾರವರು ತಮ್ಮ ತಂದೆ-ತಾಯಿ ನೆನೆದು ಸುಧೀರ್ಘವಾದ ಕವನವನ್ನು ಬರೆದಿದ್ದಾರೆ. ೩೪ ನುಡಿಗಳುಳ್ಳ ಈ ಪದ್ಯವು ಸಂಪಾದಕರ ನುಡಿಯಾಗಿಯೂ ಕೆಲಸ ಮಾಡುತ್ತದೆ ಮತ್ತು ತಿಪ್ಪೇರುದ್ರಸ್ವಾಮಿಯವರ ಇಡೀ ಜೀವನವನ್ನು ಕಟ್ಟಿಕೊಡುತ್ತದೆ. ಶೈಲಜಾರವರ ಕವನದ ಕೆಲವು ಸಾಲು ಈ ರೀತಿ ಇವೆ.

ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಎಲ್ಲರೂ ಮಾಡುವುದು ತನಗಾಗಿ ತನ್ನ ಸಂಸಾರಕಾಗಿ
ಎಲ್ಲರೂ ಮಾಡುವುದು ಆಸ್ತಿಗಾಗಿ ಚಿನ್ನ ಬೆಳ್ಳಿಗಾಗಿ
ಆದರೆ ನೀವು ಮಾಡಿದುದು ಮಾತ್ರಾ...
ಹೊಟ್ಟೆ-ಬಟ್ಟೆ ಜೊತೆ ಸಮಾಜದ ಕಣ್ಣೀರು ಒರೆಸಲಿಕಾಗಿ
ತಾನು ತನ್ನ ಸಂಸಾರದ ಜೊತೆ ಲೋಕ ಸಂಸಾರಕಾಗಿ
ಉಳಿದವರ ಹಿಂದಿದ್ದವರ ಜೊತೆಗೊಯ್ಯಲಿಕಾಗಿ
ಅದಕೇ ನಿಮಗಿದೋ ನನ್ನ ಕೋಟಿ ಕೋಟಿ ನಮನ;

ಜನಪದ ಸೇವಾ ಟ್ರಸ್ಟ್ ಸಮಾಚಾರ

ಬೆಂಗಳೂರಿನ 'ಸಂಚಾರಿ ರಂಗಭೂಮಿ' ಕಲಾ ತಂಡದವರು ಜನಪದ ಸೇವಾ ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರದಲ್ಲಿ ಬೆಂಗಳೂರು ಮತ್ತು ಇತರ ಗ್ರಾಮಗಳ ವಿದ್ಯಾರ್ಥಿಗಳಿಗಾಗಿ ನಡೆಸಿದ ಹದಿನೈದು ದಿನಗಳ ಶಿಬಿರ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಶಿಬಿರದ ಕೊನೆಯ ದಿನ ಪು.ತಿ.ನ ರವರ ಗೋಕುಲನಿರ್ಗಮನ ನಾಟಕವನ್ನು ಶಿಬಿರಾರ್ಥಿಗಳು ಪ್ರದರ್ಶಿಸಿದರು. ಅಲ್ಲದೆ ವಿವಿಧ ಬಗೆಯ ಆಟಗಳನ್ನು ಆಡಿದರು. ಐವತ್ತು ಮಕ್ಕಳು ಭಾಗವಹಿಸಿದ ಶಿಬಿರದ ಮುಕ್ತಾಯ ಸಮಾರಂಭಕ್ಕೆ ಮಕ್ಕಳ ಸಂಬಂಧಿಕರು ದೂರದೂರದ ಊರಿನಿಂದ ಬಂದಿದ್ದರು. ಅವರೆಲ್ಲರೂ ಸಾಂಸ್ಕೃತಿಕ ಕಲಾಕಾರ್ಯಕ್ರಮವನ್ನು ನೋಡಿ ಸಂತೋಷಪಟ್ಟರು. ನಂತರ ನಡೆದ ಸಾಮೂಹಿಕ ಭೋಜನ ಕೂಟದಲ್ಲಿ ಭಾಗವಹಿಸಿದರು.

* * *

ಟ್ರಸ್ಟಿನ ದತ್ತು ಕೇಂದ್ರದಲ್ಲಿ ಪೋಷಿಸಲ್ಪಡುತ್ತಿರುವ ಹೆಣ್ಣುಮಗು ಸುಗುಣಾ. ಅವಳು ಜನ್ಮಪಡೆಯುವಾಗಲೇ ಸೀಳುತುಟಿ ಹೊಂದಿದ್ದರಿಂದ ಅವಳ ದತ್ತುಪ್ರಕ್ರಿಯೆ ಸ್ವಲ್ಪ ಕಷ್ಟಕರವೆಂದೆನಿಸುತ್ತಿತ್ತು. ಆದರೆ ಎಂಥ ಕತ್ತಲೆಯಲ್ಲೂ ಬೆಳಕು ಕಾಣುವಂತೆ ಸುಗುಣಾಳ ಭವಿಷ್ಯದ ಜೀವನಕ್ಕೂ ದಾರಿ ತೆರೆದಂತಿದೆ. ವಿದೇಶದಲ್ಲಿರುವ ಓರ್ವ ದಂಪತಿಗಳು ಸುಗುಣಾಳನ್ನು ದತ್ತುತೆಗೆದುಕೊಳ್ಳಲು ಮುಂದೆಬಂದಿದ್ದಾರೆ. ಕಾನೂನು ಪ್ರಕಾರ ದತ್ತುಪ್ರಕ್ರಿಯೆ ಮುಗಿದ ನಂತರ ಸುಗುಣಾಳನ್ನು ದತ್ತುಕೊಡಲಾಗುವುದು.

* * *

ಬೆಂಗಳೂರಿನಲ್ಲಿರುವ ಸರ್ಕಾರಿ ಹೋಮಿಯೋಪತಿ ಕಾಲೇಜಿನ ಹತ್ತು ವಿದ್ಯಾರ್ಥಿಗಳು ಎರಡು ದಿನಗಳ ಭೇಟಿಗಾಗಿ ಟ್ರಸ್ಟಿಗೆ ಬಂದಿದ್ದರು. ಅವರ ಭೇಟಿಗೆ ಕಾರಣವಾದದ್ದು ಸುಪ್ರಜ್ ಕೌಲಗಿ ಕೂಡ ಅದೇ ಕಾಲೇಜಿನ ವಿದ್ಯಾರ್ಥಿ. ಆ ವಿದ್ಯಾರ್ಥಿಗಳಿಗೆ ಟ್ರಸ್ಟಿನ ಭೇಟಿ ಹೊಸ ಅನುಭವ ಮತ್ತು ಹೊಸ ವಿಚಾರಗಳನ್ನು ತೆರೆದುಕೊಟ್ಟಿತು.. ಆ ವಿದ್ಯಾರ್ಥಿಗಳಲ್ಲಿ ಕೆಲವರು ಕಲಬುರ್ಗಿ, ಬೆಳಗಾವಿ, ಓರ್ವ ಉತ್ತರಖಂಡದ ವಿದ್ಯಾರ್ಥಿ ಇದ್ದರು. ಈ ಮೊದಲು ಅದೇ ಕಾಲೇಜಿನ ಕೆಲ ವಿದ್ಯಾರ್ಥಿನಿಯರು ಭೇಟಿಕೊಟ್ಟಿದ್ದರು.

* * *

ಜನಪದ ಸೇವಾ ಟ್ರಸ್ಟಿನ ದತ್ತುಕೇಂದ್ರದಲ್ಲಿ ಸಮಾಜಸೇವಕರಾಗಿ ಕೆಲಸಮಾಡುತ್ತಿರುವ ವಿಠಲ್ ಇತ್ತೀಚೆಗೆ ಶಿಲ್ಪ ಎಂಬುವವರೊಂದಿಗೆ ವಿವಾಹವಾದರು. ಇಬ್ಬರೂ ಟ್ರಸ್ಟಿನಲ್ಲಿ ಕೆಲಸಮಾಡಿಕೊಂಡಿದ್ದಾರೆ. ಅವರಿಬ್ಬರಿಗೂ ಜನಪದ ಸೇವಾ ಟ್ರಸ್ಟಿನ ಹಾರ್ದಿಕ ಶುಭಾಶಯಗಳು.

* * *

ಇತ್ತೀಚೆಗೆ ಟ್ರಸ್ಟಿಗೆ ಭೇಟಿಕೊಟ್ಟವರಲ್ಲಿ ಎಸ್.ಕಮಲಾಐಯ್ಯರ್. ಇವರು ಜರ್ಮನ್ ಭಾಷೆಯಲ್ಲಿ ಪಾಂಡಿತ್ಯ ಪಡೆದಿದ್ದಾರೆ. ಪಧವಿಧರರಾಗಿದ್ದಾರೆ. ಬೆಂಗಳೂರಿನಲ್ಲಿರುವ ಕೆಲಕಂಪನಿಗಳಿಗೆ ಅನುವಾದಕರಾಗಿ ಕೆಲಸ ಮಾಡುತ್ತಿದ್ದಾರೆ.

* * *

ಇನ್ನೋರ್ವ ಅತಿಥಿ ರಾಹುಲ್. ಇವರು ಮೈಸೂರಿನಲ್ಲಿ ಯೋಗ ಕಲಿಯುತ್ತಿದ್ದಾರೆ. ಜೀವನದ ವಿವಿಧ ಕ್ಷೇತ್ರಗಳಲ್ಲಿ ಕೆಲಸಮಾಡುತ್ತಿರುವ ಮಹನೀಯರನ್ನು ಭೇಟಿ ಮಾಡಿ ಅನುಭವ ಪಡೆಯುವ ಹವ್ಯಾಸ ಇಟ್ಟುಕೊಂಡಿದ್ದಾರೆ. ಈಗಾಗಲೇ ಹಲವಾರು ದೇಶಗಳಿಗೆ ಭೇಟಿ ಕೊಟ್ಟಿದ್ದಾರೆ. ಮುಂದೆಯೂ ಭೇಟಿಕೊಡುವ ಉದ್ದೇಶವಿದೆ. ರಾಹುಲ್ ಅವರ ವಂಶಿಗರು ಮೂಲತಃ ಸಿಂಧ್ ಪ್ರದೇಶದವರು. ದೇಶ ವಿಭಜನೆಯ ಕಾಲದಲ್ಲಿ ನಿರಾಶ್ರಿತರಾಗಿ ಭಾರತಕ್ಕೆ ಬಂದು ಪಂಜಾಬಿನಲ್ಲಿ ನೆಲೆಸಿದರು.

* * *

ಮೈಸೂರಿನ ಸದ್‌ವಿದ್ಯಾ ಸಂಸ್ಥೆಯಲ್ಲಿ ಅಧ್ಯಾಪಕರಾಗಿರುವ ಶ್ರೀ ಗಣೇಶ್ ತಮ್ಮ ಕೆಲ ವಿದ್ಯಾರ್ಥಿಗಳೊಂದಿಗೆ ಭೇಟಿಕೊಟ್ಟರು.

●

ಮುಸ್ಸಂಜೆಯ ಬೆಳಕಿನಲ್ಲಿ.....೭

– ಸುರೇಂದ್ರ ಕೌಲಗಿ

೨೦೧೭ ಏಪ್ರಿಲ್ ೨೧ ರಿಂದ ಮೇ ೨ನೇ ತಾರೀಖಿನವರೆಗೆ ಮೇಲುಕೋಟೆಯಲ್ಲಿ ರಾಮಾನುಜ ಸಹಸ್ರ ಶತಮಾನೋತ್ಸವ ಸಮಾರಂಭ ವೈಭವಪೂರ್ಣವಾಗಿ ನಡೆಯಿತು. ದಿನಾಲು ಒಳ್ಳೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಉಪನ್ಯಾಸಗಳು ನಡೆದವು. ಗ್ರಾಮದ ಮತ್ತು ಸುತ್ತಮುತ್ತಲಿನ ಜನರು ಈ ಸಮಾರಂಭದಲ್ಲಿ ಭಾಗವಹಿಸಿ ಸಂತೋಷಪಟ್ಟರು ಮತ್ತು ವಿಶೇಷ ಅನುಭವವನ್ನು ಪಡೆದರು. ಈ ಸಮಾರಂಭದಲ್ಲಿ ಭಾಗವಹಿಸುವುದೇ ನನ್ನ ಜೀವನದ ಒಂದು ವಿಶೇಷ ಸಂದರ್ಭವಾಗಿತ್ತು. ಅದೊಂದು ಐತಿಹಾಸಿಕ ಕಾರ್ಯಕ್ರಮವಾಗಿತ್ತು. ಶ್ರೀರಾಮಾನುಜರು ಗತಿಸಿದಹೋದ ಸಹಸ್ರಮಾನ ಕಾಲದಲ್ಲಿ ಜಗತ್ತಿನಲ್ಲಿ ಏನೆಲ್ಲ ಸ್ಥಿತ್ಯಂತರಗಳಾಗಿವೆ, ಘಟನೆಗಳಾಗಿವೆ, ಬದಲಾವಣೆಗಳಾಗಿವೆ. ಕಾಲಪ್ರವಾಹದಲ್ಲಿ ಎಷ್ಟೋಂದು ನರಸಮೂಹ ತೆಲಿಹೋಗಿದೆ. ಮುಂದಿನ ಶತಮಾನೋತ್ಸವದ ವೇಳೆಗೆ ಪ್ರಪಂಚ ಯಾವ ಸ್ಥಿತಿಗೆ ತಲುಪಿರುತ್ತದೆಂದು ಊಹಿಸಲು ಸಾಧ್ಯವಿಲ್ಲ. ಆದ್ದರಿಂದ ೨೦೧೭ರ ಹೇವಿಳಂಬಿ ಸಂವತ್ಸರದಲ್ಲಿ ನಡೆದ ಶ್ರೀರಾಮಾನುಜ ಸಹಸ್ರಮಾನೋತ್ಸವದಲ್ಲಿ ಭಾಗಿಯಾದವರು ಧನ್ಯರು. ಅವರ ಜೀವಮಾನದಲ್ಲಿ ಅದು ಸದಾ ನೆನಪುಳಿಯುವಂಥದು. ಇಂಥಹದೇ ಅನುಭವ ಬೇರೆ ಮಹಾಪುರುಷರ ವಿಶೇಷ ಜಯಂತೋತ್ಸವಗಳ ಆಚರಣೆಯಲ್ಲಿಯೂ ಆಗುವುದುಂಟು. ಉತ್ಸವಕ್ಕೆ ಕಾರಣರಾಗುವ ವ್ಯಕ್ತಿಯ ಜೀವನಚರಿತ್ರೆ ಮತ್ತು ಅವರ ಸಿದ್ಧಾಂತಗಳನ್ನು ಮನನಮಾಡಿ ಅವನ್ನು ಪ್ರಚಲಿತ ಕಾಲಕ್ಕೆ ಹೇಗೆ ಅನ್ವಯಿಸಿಕೊಳ್ಳಬಹುದೆಂಬುದನ್ನು ಓರೆಗಲ್ಲಿಗೆ ಉಜ್ಜುವ ಯೋಚನೆಮಾಡಬೇಕಾದ ಸಂದರ್ಭವದು. ಹಾಗೆ ಮಾಡದೆಹೋದಲ್ಲಿ ಬಾಹ್ಯ ವೈಭವಾಚರಣೆ ಮತ್ತು ಅದಕ್ಕಾದ ಅಪಾರ ಖರ್ಚು, ಶ್ರಮ, ಸಮಯ ಎಲ್ಲವೂ ವ್ಯರ್ಥವೆಂದೆನಿಸುತ್ತದೆ.

ನನ್ನ ಮಟ್ಟಿಗಂತೂ ಮೇಲುಕೋಟೆಯಲ್ಲಿ ನಡೆದ ಸಹಸ್ರಮಾನೋತ್ಸವ ಮೂರು ರೀತಿಯಲ್ಲಿ ಸಂತೋಷವನ್ನು ತಂದುಕೊಟ್ಟಿತು. ಅರವತ್ತು ವರ್ಷಗಳಿಂದ ಮೇಲುಕೋಟೆಯಲ್ಲಿ ವಾಸವಾಗಿದ್ದು ವಿವಿಧ ಸೇವಾಕಾರ್ಯಗಳನ್ನು ನಡೆಸಿದ್ದು ಒಂದು ಕಾರಣವಾದರೆ, ಎರಡನೆಯದು ಶ್ರೀರಾಮಾನುಜರು ಮೇಲುಕೋಟೆಗೆಬಂದ ದಿನವನ್ನು 'ಪುನರ್ವಸು' ಎಂಬ ಹೆಸರಿನಲ್ಲಿ ಆಚರಣೆಯಾಗುತ್ತಿರುವುದನ್ನು ಪ್ರತಿವರ್ಷ ನೋಡುತ್ತಾ ಬಂದಿದ್ದ ನನಗೆ ಸಹಸ್ರಮಾನೋತ್ಸವ ಸಮಾರಂಭವನ್ನೂ ನೋಡುವ ಮತ್ತು ಅದರಲ್ಲಿ ಪರೋಕ್ಷವಾಗಿ ಭಾಗವಹಿಸುವ ಅವಕಾಶವೂ ನನ್ನ ಜೀವಮಾನದಲ್ಲಿಯೇ ಸಿಕ್ಕದ್ದಕ್ಕಾಗಿ;

ಮೂರನೇಯ ಹಾಗೂ ವಿಶೇಷ ಕಾರಣವೇನೆಂದರೆ ನನ್ನ ಮೊಮ್ಮಗಳಾದ ಸುಹಾಸಿನಿ 'ಕೃಪಾಮಾತ್ರಾಪ್ರಸನ್ನ್ ರಾಮಾನುಜಚಾರ್ಯ' ಎಂಬ ನೃತ್ಯ ರೂಪಕವನ್ನು ಭರತನಾಟ್ಯದ ಮೂಲಕ ಪ್ರದರ್ಶಿಸಿದುದು. ಅವಳಿಗೆ ಈಗ ಪ್ರೌಢ ವಯಸ್ಸು. ನನ್ನ ಆರು ದಶಕಗಳ ಕಾರ್ಯಕ್ಷೇತ್ರ ಮೇಲುಕೋಟೆಯಲ್ಲಿ ಶ್ರೀರಾಮಾನುಜಚಾರ್ಯರ ಸಹಸ್ರಮಾನೋತ್ಸವವನ್ನು ಕುರಿತು ರಚನೆಯಾಗಬಹುದಾದ ಭವ್ಯವಾದ ವೇದಿಕೆಯ ಮೇಲೆ ನೃತ್ಯಮಾಡಿ ಸೇರಿದ ಸಮಸ್ತ ಜನರ, ಅದರಲ್ಲಿ ಮುಖ್ಯವಾಗಿ ಶ್ರೀವೈಷ್ಣವಸಂಪ್ರದಾಯದವರ ಮೆಚ್ಚಿಗೆಯನ್ನು ಗಳಿಸುತ್ತಾಳೆಂಬುದು ನನ್ನ ಊಹೆಗೂ ಮೀರಿದ್ದಾಗಿತ್ತು. ಅಂಥ ಊಹಾತಿತ ಮತ್ತು ಕನಸ್ಸಿನಲ್ಲಿಯೂ ಕಾಣದಂಥ ಸಂತೋಷದ ಸಂಗತಿಯೊಂದು ನಡೆದುದು. ಒಂದು ರೀತಿಯಲ್ಲಿ ಮೊಮ್ಮಗಳ ನೃತ್ಯ ಪ್ರದರ್ಶನ ಮೂಲಕ ಊರಿನವರ ಋಣವನ್ನು ತೀರಿಸಿದುದ್ದಕ್ಕಾಗಿ ಕೃತಜ್ಞತೆಯ ಭಾವನೆಯಿಂದ ಮನಸ್ಸು ತೇವಗೊಂಡಿತು.

***

ಸಮಾಜಸೇವೆ ಮಾಡುವಾಗ ವಿವಿಧ ಕ್ಷೇತ್ರದಲ್ಲಿ ಕೆಲಸಮಾಡುವ ಗ್ರಾಮಸ್ಥರ ಪರಿಚಯವಾಗುವುದು ಸಹಜ. ವ್ಯಾಪಾರಸ್ಥರ, ಅರ್ಚಕರ, ಗಾಣಿಗರ ನೇಕಾರರ ಮತ್ತು ಮೇದರ ಪರಿಚಯ ಆಯಿತು. ಗಾರೆಕೆಲಸದ ವೃತ್ತಿಯಲ್ಲಿ ತೊಡಗಿಕೊಂಡಿದ್ದ ವೀರೇಗೌಡರ ಪರಿಚಯವು ಆಯಿತು. ಊರಿನ ಹಿರಿಯ ಮತ್ತು ಅನುಭವಿ ಗಾರೇಕೆಲಸದವರಾಗಿದ್ದ ಶ್ರೀ ಜೋಗಿಗೌಡರ ಮಾರ್ಗದರ್ಶನದಲ್ಲಿ ವೀರೇಗೌಡರು ಗಾರೇಕೆಲಸ ಕಲಿತ್ತಿದ್ದರು. ಅವರ ಹೆಸರು ಮೂಲತಃ ವಿರೇಗೌಡ ಆದರೆ ಎಲ್ಲರೂ ಅವರನ್ನು ಈರೇಗೌಡ ಎಂದೇ ಕರೆಯುತ್ತಿದ್ದರು. ಸ್ವಭಾವತಃ ಒಳ್ಳೆಯ ಮನುಷ್ಯನಾದ ಈರೇಗೌಡರಲ್ಲಿ ಕುಡಿಯುವ ಅಭ್ಯಾಸವಿತ್ತು. ಹೀಗಾಗಿ ಅವರು ಎಷ್ಟೇ ದುಡಿಮೆ ಮಾಡಿದರೂ ಜೀವನವನ್ನು ಕಷ್ಟದಲ್ಲೇ ಕಳೆಯಬೇಕಾಗುತ್ತಿತ್ತು. ಟ್ರಸ್ಟಿನಲ್ಲಿಯ ಕೆಲವು ನಿರ್ಮಾಣದ ಕೆಲಸಕ್ಕೆ ಅವರ ಸೇವೆಯನ್ನು ಪಡೆಯಲಾಗುತ್ತಿತ್ತು. ಹಾಗೆ ಸೇವೆಯನ್ನು ಪಡೆದಾಗಲ್ಲೆಲ್ಲ ಈರೇಗೌಡರು ಕೆಲಸ ಪ್ರಾರಂಭಿಸುವ ಮೊದಲೇ ಮುಂಗಡವಾಗಿ ಹಣ ಕೇಳುತ್ತಿದ್ದರು; ಕೆಲಸ ಮುಗಿಯುತ್ತಿದ್ದಂತೆಯೇ ಪುನಃ ಹಣ ಕೇಳುತ್ತಿದ್ದರು. ಆದ್ದರಿಂದ ಈರೇಗೌಡರ ಬಗ್ಗೆ ಎಷ್ಟೇ ಪ್ರೀತಿ ಇದ್ದರೂ ಅವರನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳಲು ಯೋಚನೆ ಮಾಡಬೇಕಾಗುತ್ತಿತ್ತು. ಆದರೂ ನಮ್ಮಿಬ್ಬರ ಮಧ್ಯೆ ವಿಶ್ವಾಸ ಉಳಿದುಕೊಂಡೇ ಬಂದಿತ್ತು. ಕೆಲಸ ಮುಗಿದ ನಂತರ ಅನೇಕ ವೇಳೆ ಕಾಫಿ-ತಿಂಡಿ, ಮಾಡುತ್ತಾ ಕಾಲ ಕಳೆದಿದುವುಂಟು. ಈರೇಗೌಡರ ಅಣ್ಣನಾಗಿದ್ದ ಹುಚ್ಚುಮಾಯೇ ಗೌಡ ವ್ಯವಸಾಯ ಮಾಡುತ್ತ ಈಚಲ ಮರದ ಕಡ್ಡಿಯಿಂದ ಬುಟ್ಟಿ ತಯಾರಿಸುವ ಕಲೆ ಕಲಿತುಕೊಂಡಿದ್ದರು. ಆಗಿನ್ನೂ ಕಬ್ಬಿಣದ ಮತ್ತು ಪ್ಲಾಸ್ಟಿಕಿನ ಬಾಂದಲೀಗಳು ಹೆಚ್ಚಾಗಿ ಉಪಯೋಗಕ್ಕೆ ಬಂದಿರಲಿಲ್ಲವಾದ್ದರಿಂದ ಮಣ್ಣುಹೊರೆವ ಕೆಲಸಕ್ಕೆ ಈಚಲ

ಬುಟ್ಟಿಗಳನ್ನೇ ಉಪಯೋಗಿಸುತ್ತಿದ್ದರು. ಆದ್ದರಿಂದ ಹುಚ್ಚುಮಾಯೇಗೌಡರು ತಯಾರಿಸುತ್ತಿದ್ದ ಬುಟ್ಟಿಗಳಿಗೆ ಸದಾ ಬೇಡಿಕೆ ಇರುತ್ತಿತ್ತು. ಆದರೆ ಅವರು ಕೂಡ ತಮ್ಮ ಈರೇಗೌಡರಂತೆ ಕುಡಿತದ ಅಭ್ಯಾಸಕ್ಕೆ ಒಳಗಾಗಿದ್ದರು. ನಮ್ಮ ಈರೇಗೌಡರ ಮಗನೇ ಪುಟ್ಟವೀರೆಗೌಡ ಈತನೂ ಸಹ ತನ್ನ ತಂದೆ ಮತ್ತು ದೊಡ್ಡಪ್ಪನಂತೆ ಕುಡಿಯುವ ಚಟಕ್ಕೆ ಒಳಗಾಗಿ ಬಿಟ್ಟ. ಆಗ ಅವನದು ಹದಿಹರೆಯದ ವಯಸ್ಸು. ಅವನ ಕುಡಿತದ ದೌರ್ಬಲ್ಯವನ್ನು ಉಪಯೋಗಿಸಿಕೊಂಡು ಜನರು ಅವನಿಂದ ಅನೇಕ ಬಗೆಯ ಶ್ರಮದ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಊರಲ್ಲಿ ಎಲ್ಲಿಯೇ ಕಳ್ಳತನವಾದರೂ ಪುಟ್ಟವೀರೇಗೌಡನನ್ನೇ ಅನುಮಾನದಿಂದ ಪೋಲೀಸ್ ಠಾಣೆಗೆ ಅನೇಕ ಸಲ ಕರೆದುಕೊಂಡು ಹೋಗಿದ್ದು ಇದೆ. ಅಂಯತೂ ಅವನ ವಿವಾಹವಾಯಿತು. ಒಬ್ಬ ಮಗನೂ ಆದ, ಆದರೆ ಪುಟ್ಟವೀರೆಗೌಡ ಕುಡಿಯುವುದನ್ನು ಬಿಡಲಿಲ್ಲ. ಆದ್ದರಿಂದ ಹೆಂಡತಿ ಮತ್ತು ಮಕ್ಕಳು ದೂರವಾದರು. ಪುಟ್ಟವೀರನು ತನ್ನ ತಂದೆ ಮತ್ತು ಚಿಕ್ಕಪ್ಪನೊಂದಿಗೆ ಇದ್ದ ಟ್ರಸ್ಟಿನ ಸಂಪರ್ಕದ ಪ್ರಯೋಜನ ಪಡೆದು ಕ್ರಮೇಣ ಟ್ರಸ್ಟಿನ ಸಹವಾಸದಲ್ಲಿ ಬರುತ್ತಿದ್ದ. ಅವನ ಹೆಂಡತಿ ಪ್ರೇಮ. ಟ್ರಸ್ಟಿನ ಶ್ರೀಕೃಷ್ಣಶಿಶುವಿಹಾರದಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದಳು. ಈತ ಆಗಾಗ್ಗೆ ಕುಡಿದು ಮನೆಯೊಳಗೆ ಬಂದು ನಮ್ಮೊಂದಿಗೆ ಮಾತನಾಡುತ್ತಿದ್ದ. ಆಗ ಅವನಿಗೆ ಬುದ್ಧಿವಾದ ಹೇಳುತ್ತಿದ್ದೆವು. ಅನೇಕ ಸಲ ಅವನು ನಮ್ಮಗಳ ಮೇಲೆ, ಗಿರಿಜಮ್ಮನವರ ಮೇಲೆ ಆಣೆ ಇಟ್ಟು ತಾನು ಕುಡಿಯುವುದನ್ನು ಬಿಟ್ಟುಬಿಡುವುದಾಗಿ ಹೇಳುತ್ತಿದ್ದ. ಆದರೆ ಎಂದು ಅವನಿಗೆ ಆಣೆಯನ್ನು ಎಂದೂ ಈಡೇರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇಂಥ ಪ್ರಯತ್ನಗಳು ಹಲವಾರು ವರ್ಷಗಳಿಂದ ನಡೆಯುತ್ತಲೇ ಇದ್ದವು. ಪುಟ್ಟವೀರೆಗೌಡ ತನ್ನ ದುರಭ್ಯಾಸದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೇ ಇದ್ದುದಕ್ಕೆ ಅವನ ಸಹವಾಸವೇ ಮುಖ್ಯ ಕಾರಣವೆಂದು ಗೊತ್ತಾಗಿ ಅವನನ್ನು ಆ ಕೆಟ್ಟ ಸಹವಾಸದಿಂದ ದೂರವಿಡಲು ಪ್ರಯತ್ನಿಸಿದೆವು. ಒಂದು ರೀತಿಯಲ್ಲಿ ಅವನನ್ನು ಸುಮಾರು ಒಂದು ತಿಂಗಳು ಗೃಹಬಂಧನಕ್ಕೆ ಒಳಗಾಗಿಸಿದೆವು! ಸಾಧ್ಯವಾದಾಗಲೆಲ್ಲಾ ಟ್ರಸ್ಟಿನ ಕಾರ್ಯಚಟುವಟಿಕೆಯಲ್ಲಿ ಅವನನ್ನು ತೊಡಗಿಸುತ್ತ ಬಂದೆವು. ಇಂಥ ಎಲ್ಲ ಸಕಾರಾತ್ಮಕ ಉಪಕ್ರಮಗಳಿಂದಾಗಿ ಈಗ ಪುಟ್ಟವೀರೆಗೌಡ ಸಂಪೂರ್ಣವಾಗಿ ಮದ್ಯವನ್ನುತ್ಯಜಿಸಿ ಹೊಸಮನುಷ್ಯನಾಗಿದ್ದಾನೆ ಮತ್ತು ಸುತ್ತಲಿನವರೆಲ್ಲರ ಪ್ರೀತಿಗೆ ಪಾತ್ರರಾಗಿದ್ದಾನೆ. ನಮ್ಮ ಸಂಸ್ಥೆಯ ಮತ್ತು ಕುಟುಂಬದ ಓರ್ವ ಸದಸ್ಯನಾಗಿದ್ದಾನೆ. ಕೆಲ ಸಂದರ್ಭಗಳಲ್ಲಿ ಅವನು ಅನಿವಾರ್ಯ ವ್ಯಕ್ತಿಯೂ ಆಗುವಷ್ಟರ ಮಟ್ಟಿಗೆ ತನ್ನ ಉಪಯುಕ್ತತೆಯ ಸಾಮರ್ಥ್ಯವನ್ನು ಬೆಳೆಸಿಕೊಂಡಿದ್ದಾನೆ. ಹೀಗೆ ದುಷ್ಚಟದಿಂದ ಹಾಳಾಗುತ್ತಿದ್ದ ಓರ್ವ ಯುವಕನು ಈಗ ಸನ್ಮಾರ್ಗದಲ್ಲಿ ಬಂದದ್ದನ್ನು ನೋಡುವುದೇ ಒಂದು ಸಾಮಾಜಿಕ ಕ್ರಾಂತಿಯ

ವಿಷಯವಾಗಿದೆ. ಅವನು ಪುನಃ ಹೆಂಡತಿ ಪ್ರೇಮಾ ಮತ್ತು ಹದಿನಾರು ವರ್ಷದ ಶಾಶ್ವತ ಎಂಬ ಮಗನೊಂದಿಗೆ ಕೌಟುಂಬಿಕ ಜೀವನವನ್ನು ನಡೆಸುವಂತೆ ಮಾಡಲೂ ಪ್ರಯತ್ನಿಸಲಾಗುತಿದ್ತೆ. ಮನುಷ್ಯ ದುಸಂಗದಿಂದ ಹೇಗೆ ಕೆಡುತ್ತಾನೆ ಮತ್ತು ಸತ್‌ಸಂಗದಿಂದ ಹೇಗೆ ಒಳ್ಳೆಯನಾಗುತ್ತಾನೆ ಎಂಬುದಕ್ಕೆ ಪುಟ್ಟವೀರೆಗೌಡನದು ಒಂದು ಜ್ವಲಂತ ಉದಾಹರಣೆಯಾಗಿದೆ.

ದೊರೆಯನ್ನು ಪ್ರಶ್ನಿಸುವ ದೊರೆಸ್ವಾಮಿ

ಡಾ॥ ಎಚ್. ಎಸ್. ದೊರೆಸ್ವಾಮಿಯವರು ಶತಾಯುಷಿಗಳಾಗಲೆಂದು ಮನಃಪೂರ್ವಕವಾಗಿ ಹಾರೈಸುತ್ತೇನೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅದರಲ್ಲಿಯೂ ಮುಖ್ಯವಾಗಿ ಕರ್ನಾಟಕದಲ್ಲಿ ಲೋಕಮತವನ್ನು ಅಭಿವ್ಯಕ್ತಪಡಿಸುವ ರಾಜಕೀಯೇತರ ವ್ಯಕ್ತಿಗಳು ಅತಿ ವಿರಳವಾಗಿರುವಂತಹ ಸಂದರ್ಭದಲ್ಲಿ ರಾಜಕೀಯೇತರ ಲೋಕಮತದ ಬಿಸಿಯನ್ನು ಪ್ರಭುತ್ವಕ್ಕೆ ಮುಟ್ಟಿಸುವ ಎದೆಗಾರಿಕೆಯನ್ನು ತೋರಿಸುತ್ತಿರುವ ಪಕ್ಷೇತರ ನಾಯಕ ಡಾ॥ ಎಚ್.ಎಸ್. ದೊರೆಸ್ವಾಮಿ. ಚುನಾವಣೆಗಳಾದ ನಂತರ ಜನತೆ ಕುಂಭಕರ್ಣ ನಿದ್ರೆಗೆ ಹೋಗುವುದು ಸಹಜವಾಗಿದೆ. ಚುನಾಯಿತ ಸರ್ಕಾರ ಮೈದಾನವು ತನ್ನದೇ ಕುದುರೆಯೂ ತನ್ನದೇ ಎಂದು ಭಾವಿಸಿ ತನ್ನ ಕುದುರೆಯನ್ನು ಯಾವ ರೀತಿಯಲ್ಲಾದರೂ ಓಡಿಸಬಹುದು. ಜನತೆ ಅದನ್ನು ನೋಡಿಕೊಂಡು ಸುಮ್ಮನೆ ಇರುತ್ತದೆ. ಅದು ಒಂದು ಬಗೆಯಲ್ಲಿ ಪ್ರಜಾಪ್ರಭುತ್ವದ ಅಣಕವೇ ಎಂದೆನ್ನಬಹುದು. ಇಂಥ ವಿಪರ್ಯಾಸದ ಪರಿಸ್ಥಿಯನ್ನು ತಪ್ಪಿಸಲು ಜನಜಾಗೃತಿಗಾಗಿ ಪ್ರಯತ್ನಿಸದಂಥವರು ದೊರೆಸ್ವಾಮಿಯವರು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಕರ್ತವ್ಯವೇನು ಮತ್ತು ಅವರು ಎಷ್ಟೊಂದು ಜಾಗೃತವಾಗಿರಬೇಕೆಂಬುದನ್ನು ತಮ್ಮ ಕೆಲ ಪ್ರತ್ಯಕ್ಷ ಹೋರಾಟಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಆ

ಕಾರಣಕ್ಕಾಗಿ ಪ್ರಜಾತಂತ್ರ ಪೇಮಿಗಳೆಲ್ಲರೂ ಶ್ರೀ ದೊರೆಸ್ವಾಮಿಯವರಿಗೆ ಋಣಿಯಾಗಿರಬೇಕು. ಕರ್ಮ ಮಾಡುತ್ತಲೇ ಶತಾಯುಷ್ಯಿಗಳಾಗಬೇಕೆಂಬ ಅವರ ಮನದಾಳದ ಇಚ್ಛೆಯನ್ನು ತಿಳಿದವರಿಗೆ ಅದರಲ್ಲಿಯೂ ಯುವಕರಿಗೆ ಪ್ರೇರಕ ಶಕ್ತಿಯಾಗಿದೆ. ಸ್ವಾತಂತ್ರ್ಯೋತ್ತರ ಮತ್ತು ಆಚಾರ್ಯ ವಿನೋಬಾ ಬಾವೆ ಪ್ರಣೀತ ಭೂದಾನಾಂದೋಲನೋತ್ತರ ಕರ್ನಾಟಕದಲ್ಲಿ ಗಾಂಧೀಜಿಯವರ ಸವಿನಯ ಪ್ರತಿರೋಧದ ಹೋರಾಟಗಾರರಾಗಿ ಡಾ॥ ಎಚ್. ಎಸ್. ದೊರೆಸ್ವಾಮಿಯವರು ನಮಗೆ ಸದಾ ಮಾದರಿ ವ್ಯಕ್ತಿಯಾಗಿ ಇರುತ್ತಾರೆ.

– ಸುರೇಂದ್ರ ಕೌಲಗಿ

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ ರಂಗಮಣಿ ಜನಾರ್ಧನ್	–	ಬೆಂಗಳೂರು
ಶ್ರೀ ವೆಂಕಟೇಶ್ ಎ	–	ಮಂಗಳೂರು
ಶ್ರೀ ರಾಜಶೇಖರ್ ಕದಂಬ	–	ಮೈಸೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ"

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ. ಪತ್ರಿಕೆಯಲ್ಲಿಯ ಲೇಖನಗಳ ಬಗ್ಗೆ ಅಭಿಪ್ರಾಯ ಮತ್ತು ಟೀಕೆ–ಟಿಪ್ಪಣಿಗಳನ್ನು ತಿಳಿಸಬೇಕಾಗಿ ವಿನಂತಿ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ಚಂದಾದಾರರಲ್ಲಿ ವಿನಂತಿ:–

"ಜನಪದ ವಿಚಾರ" ಪ್ರತಿ ತಿಂಗಳು ೩೦ನೇ ತಾರೀಖು ಅಂಚೆಗೆ ಹೋಗುತ್ತದೆ. ತಿಂಗಳ ಒಂದು ವಾರದಲ್ಲಿ ಪತ್ರಿಕೆ ತಲುಪದಿದ್ದರೆ ಕೂಡಲೆ ತಿಳಿಸಿ –೯೧೪೫೧೨೦೦೮೧೨

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237